ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ಜನಪದ ವಿಚಾರ

ವೈಚಾರಿಕ ತಿಂಗಳ ಡೈಜೆಸ್ಟ್

ಸಂಪುಟ ೨ ಫೆಬ್ರವರಿ, ೨೦೦೨ ಸಂಚಿಕೆ ೭

ಮಹಾತ್ಮರ ಮರಣದ ಸಂದೇಶವನ್ನು ಭಾರತ ಎಂದು ತಿಳಿಯುವುದೊ?

★

ಮಾಹಿತಿ ತಂತ್ರಜ್ಞಾನ ಕುರಿತು ಎಚ್ಚರಿಕೆ ಅಗತ್ಯ

★

ಯುವಕರ ಪ್ರೇರಣಾ ಪುರುಷ ಜಯಪ್ರಕಾಶ್

★

ಗಾಂಧೀ ಮತ್ತು ಇಂದಿನ ಭಾರತೀಯ ಆರ್ಥಿಕ ಸ್ಥಿತಿ

★

★ ಈ ಸಂಚಿಕೆಯಲ್ಲಿ ★

ಜನಪದ ವಿಚಾರ

ವೈಚಾರಿಕ ತಿಂಗಳ ಡೈಜೆಸ್ಟ್

ಸಂಪುಟ : ೨ ಸಂಚಿಕೆ : ೭

ಫೆಬ್ರವರಿ ೨೦೦೨

ಸಂಪಾದಕ
ಸುರೇಂದ್ರ ಕೌಲಗಿ

ಸಲಹಾ ಸಮಿತಿ,
ಜನಪದ ಸೇವಾ ಟ್ರಸ್ಟ್
ಧರ್ಮದರ್ಶಿ ಮಂಡಳಿ

...

ಚಂದಾ ವಿವರ :

ವಾರ್ಷಿಕ : ರೂ. ೧೦೦/-
ಅರ್ಧವಾರ್ಷಿಕ : ರೂ. ೫೦/-
ಬಿಡಿ ಸಂಚಿಕೆ : ರೂ. ೧೦/-

ಸಂಪರ್ಕ ವಿಳಾಸ :
ಜನಪದ ಸೇವಾ ಟ್ರಸ್ಟ್ (ರಿ.)
ಕಲ್ಯಾಣಿ ಬೀದಿ,
ಮೇಲುಕೋಟೆ
ಜಿಲ್ಲಾ : ಮಂಡ್ಯ. ೫೭೧ ४३१.

ದೂರವಾಣಿ:೦೮೨೩೬ ४८७५४

ನನ್ನ ಮಿತಿಗಳ ನಾನು ಬಲ್ಲೆ
ಅದೇ ನನ್ನ ಸಾಧನೆ
ಆಸಕ್ತಿಗಳು ಹೇರಳ
ಅವಕಾಶಗಳು ಸೊನ್ನೆ
ನನ್ನ ಅಲ್ಪಾಯು ಪ್ರತಿಭೆ ಮುರುಟಿದ್ದರೆ
ಕಾರಣವಿದು ಗೆಳೆಯಾ
ನಾವು ಬೀಳುವ ಪ್ರಪಾತದ ಆಳ
ನಾವು ಏರುವ ಎತ್ತರದಲ್ಲಿ ಅಡಗಿದೆ
ನಮ್ಮ ನಿರಸನಗಳ ಮೂಲ
ನಮ್ಮ ಭ್ರಮೆಗಳ ಉದರದಲ್ಲಿ ಹುದುಗಿದೆ.
ನಾನುಪ್ರಕ್ಷುಬ್ಧ ಕ್ಷಣಗಳನ್ನು ಪ್ರೀತಿಸುತ್ತೇನೆ
ಆಗ ನನ್ನ ನಾನು ಅರಿಯುತ್ತೇನೆ.
ಇತರರನ್ನು ತಿಳಿಯುತ್ತೇನೆ.
ಜಗತ್ತನ್ನು ಅರ್ಥೈಸುತ್ತೇನೆ.
ಮಾತುಗಳನ್ನು ಅರ್ಥಗಳನ್ನು ಅವುಗಳ
ನಡುವಿನ ಕಂದರವನ್ನು ಅನುಭವಿಸುತ್ತೇನೆ.
ಪ್ರತಿಯೊಂದು ನಿಯಮಕ್ಕೂ ಅಪವಾದವಿದೆ
ಅಷ್ಟು ಮಾತ್ರವಲ್ಲ. ನಿಯಮವನ್ನು
ಸರಿಯಾದ ವೇಳೆಯಲ್ಲಿ ಮೀರುವವರೇ
ನಿಜವಾಗಿ ನಿಯಮದ ಪಾಲಕರು
ಹಾದಿಯಿಲ್ಲದೆಡೆ ಹಾದಿ ಮಾಡಿದವ
ತಾನೆ ಮೊದಲು ನಡೆದು
ಮೆಚ್ಚುಗೆ ಪಡೆಯುತ್ತಾನೆ.
ನಿಂದೆಯನ್ನು ಪಡೆಯುತ್ತಾನೆ
ಮೆಚ್ಚಿದವರು ಸುಮ್ಮನಿದ್ದಾರು
ಅಥವಾ ಅನುರಿಸಿಯಾರು
ನಿಂದಿಸಿದವರು ಮಾತ್ರ
ಹೆಚ್ಚಾಗಿ ಹುಚ್ಚಾಗಿ ಅನುಸರಿಸುತ್ತಾರೆ.
ಲೋಕಜೀವನ ಎಂಥ ವಿಚಿತ್ರ

–ಎಚ್. ಎಸ್. ಸುಜಾತ

ಚಂದಾ ಕಳುಹಿಸಿರುವ ಓದುಗರಿಗೆ ಕೃತಜ್ಞತೆಗಳು. – ಪ್ರಕಾಶಕರು

ವಿಚಾರ ದೀಪ್ತಿ....................

ಕೀರ್ತಿಯಿಂದ ಕೃತಿಯ ಪರಂಪರೆ ಜಾರಿಯಲ್ಲಿರುತ್ತದೆ. ಅದರೊಳಗಿಂದ ಸಂಸ್ಕೃತಿ ನಿರ್ಮಾಣಗೊಳ್ಳುತ್ತದೆ. ಯಾವುದೇ ಸಮಾಜ ಇರಲಿ ಅದರಲ್ಲಿ ಒಳ್ಳೆಯ ಕೆಲಸಗಳನ್ನು ಮಾಡುವ ಪ್ರಯತ್ನ ನಡೆದಿದೆ. ಅದಕ್ಕಾಗಿ ಆ ಸಮಾಜದಲ್ಲಿ ಆತ್ಮಭಾವ ಹುಟ್ಟಿದೆ. ಅದರ ಹೆಸರೇ ಸಂಸ್ಕೃತಿ.

ಯಾರೋ ಹಸು ಮತ್ತು ಎತ್ತುಗಳ ಸಮುಚಿತ ಉಪಯೋಗದ ಕಲ್ಪನೆಯನ್ನು ಕಂಡುಹಿಡಿದರು. ಎತ್ತಿನ ಉಪಯೋಗವನ್ನು ಚೆನ್ನಾಗಿ ಮಾಡಿದರು ಮತ್ತು ಹಸುವನ್ನು ಕರೆದರು ಹಸುವಿನ ಹಾಲನ್ನು ಕರೆಯುವ ಕಲ್ಪನೆ ಮನುಷ್ಯನ ಒಂದು ಶೋಧನೆ ಆಗಿದೆ. ಒಳ್ಳೆಯದಾಗಲೀ, ಕೆಟ್ಟದಾಗಲೀ ಅದು ಮನುಷ್ಯನ ಶೋಧನೆಯಾಗಿದೆ. ಒಂದು ಪ್ರಾಣಿ ಬೇರೊಂದು ಪ್ರಾಣಿಯ ಹಾಲು ಕುಡಿಯುವ ಯೋಜನೆ ಇರುವುದನ್ನು ನಾವು ಪ್ರಕೃತಿಯಲ್ಲಿ ನೋಡುವುದಿಲ್ಲ. ಹುಲಿ, ಸಿಂಹದ ಹಾಲನ್ನಾಗಲೀ ಅಥವಾ ಮೊಲದ ಹಾಲನ್ನಾಗಲೀ ಕುಡಿಯುವ ಯೋಜನೆಯನ್ನು ಮಾಡಿಕೊಂಡಿಲ್ಲ. ಮೊಲವನ್ನು ತಿಂದುಹಾಕುವ ಯೋಜನೆ ಅದು ಮಾಡಿಕೊಂಡಿದೆ. ಆದರೆ ಮನುಷ್ಯನು ಹಸು, ಎಮ್ಮೆ, ಆಡು ಮುಂತಾದವುಗಳ ಹಾಲು ಕುಡಿಯುವ ಯೋಜನೆ ಮಾಡಿದನಷ್ಟೇ ಅಲ್ಲ. ಅವುಗಳ ಹಾಲನ್ನು ಕುಡಿದರೆ ಆ ಪ್ರಾಣಿಗಳು ನಮ್ಮ ಮಟ್ಟಿಗೆ ತಂದೆ-ತಾಯಿಗಳ ಸಮಾನ ಎಂದೂ ಅವನು ಅರಿತುಕೊಂಡ. ನಾವು ತಾಯಿಯ ಹಾಲು ಕುಡಿಯುತ್ತೇವೆ; ತಂದೆ ನಮ್ಮ ಸೇವೆ ಮಾಡುತ್ತಾನೆ. ತಾಯಿ ಉಣಬಡಿಸುತ್ತಾಳೆ. ತಂದೆ ಉತ್ಪಾದನೆಯ ಕೆಲಸ ಮಾಡುತ್ತಾನೆ. ಎತ್ತು ನಮ್ಮ ಸಂಸಾರಕ್ಕಾಗಿ ಉತ್ಪಾದನೆ ಮಾಡುತ್ತದೆ. ಹಸು ಹಾಲು ಕೊಡುತ್ತದೆ. ಅಂದರೆ ಅವು ತಂದೆ ತಾಯಿಗಳ ಸ್ಥಾನ ಪಡೆದವು. ಹೇಗೆ ಸಮಾಜದಲ್ಲಿ ಪ್ರತಿಯೊಬ್ಬ ವ್ಯಕ್ತಿಗೆ ಪೂರ್ಣ ಸಂರಕ್ಷಣೆಯ ಯೋಜನೆ ಇರುತ್ತದೋ ಹಾಗೆಯೇ ನಮ್ಮ ಈ ವ್ಯಾಪಕ ಸಮಾಜದಲ್ಲಿ ಹಸು – ಎತ್ತುಗಳಿಗೆ ಪೂರ್ಣ ರಕ್ಷಣೆ ಕೊಡುವ ಯೋಜನೆ ಬಂದಿತು. ಸಂಸ್ಕೃತಿ ಆಯಿತು.

–ವಿನೋಬಾ

ಮಾಹಿತಿತಂತ್ರಜ್ಞಾನ ಕುರಿತು ಎಚ್ಚರಿಕೆ ಅಗತ್ಯ

– ಬರಗೂರು ರಾಮಚಂದ್ರಪ್ಪ

ನಮ್ಮ ಬೇಕು ಬೇಡಗಳನ್ನು ಕೇಳದೆ, ಹೇಳದೆ ಮಾಹಿತಿ ತಂತ್ರಜ್ಞಾನವು ತನ್ನ ಮಾಯಾಜಾಲವನ್ನು ವಿಸ್ತರಿಸಿಕೊಳ್ಳುತ್ತಿರುವ ಕಾಲಘಟ್ಟದಲ್ಲಿ ನಾವು ನಿಂತಿದ್ದೇವೆ. ಕಾಲದ ಕಾಳಜಿಗಳನ್ನು ಯಾರು ಅಥವಾ ಯಾವುದು ಕಬಳಿಸಬಹುದು, ರೂಪಿಸಬಹುದು, ನಿಸ್ತರಿಸಬಹುದು, ಎಂಬ ಅಂಶ ಕಾಲದ ಕೈಯನ್ನು ಮೀರಿ ಹೇರಲ್ಪಡುವ ಸನ್ನಿವೇಶವೂ ಸೃಷ್ಟಿಯಾಗುವುದುಂಟು. ಹೀಗಾಗಿ ನಾವು ನಿಂತಿರುವ ಕಾಲ ನಮ್ಮದಾಗಬಹುದು, ನಮ್ಮದಾಗದೆಯೂ ಇರಬಹುದು. ಅಥವಾ ನಮ್ಮದೆಂಬ ಭ್ರಮೆಯನ್ನು ಮೂಡಿಸಬಹುದು. ಮುಂದುವರೆದ ದೇಶಗಳ ವಿವಿಧ ಹುನ್ನಾರಗಳಲ್ಲಿ ಕಾಲಕ್ಕೆ ಒದಗುವ ಸರ್ಪದರ್ಪವು ಅಭಿವೃದ್ಧಿಶೀಲ ದೇಶಗಳ ದಿಕ್ಕನ್ನೇ ಬದಲಾಯಿಸಬಹುದು.

ಮಾಹಿತಿ ತಂತ್ರಜ್ಞಾನವು ವಿಜೃಂಭಿಸಲ್ಪಡುತ್ತಿರುವ ಈ ಕಾಲಘಟ್ಟದಲ್ಲಿ ಕನ್ನಡವು ಕಾಲಗರ್ಭ ಸೇರುವಂತಾಗಬಾರದು ಎಂಬ ಕಾಳಜಿ ಹಾಗೂ ಕಳಕಳಿ ಎಂದಿಗಿಂತ ತೀವ್ರವಾಗಬೇಕಾಗಿದೆ. ಈ ಸಂದರ್ಭದಲ್ಲಿ ಒಂದು ಮುಖ್ಯ ತಾತ್ವಿಕ ಅಂಶವನ್ನು ಚರ್ಚಿಸ ಬಯಸುತ್ತೇನೆ.

ಮಾಹಿತಿ ತಂತ್ರಜ್ಞಾನವು ಇವತ್ತಿನ ಬಹು ಮುಖ್ಯ ವೈಜ್ಞಾನಿಕ ಅವಿಷ್ಕಾರ. ಆದರ ಇವತ್ತು ವಿಜ್ಞಾನವು ವಿಜ್ಞಾನಿಗಳ ಕೈಯಲ್ಲಿ ಮಾತ್ರ ಇದೆಯೇ? ವಿಜ್ಞಾನಿಗಳೇ ನಡೆಸುತ್ತಾರಾದರೂ ಸಂಶೋಧನೆಗೆ ಸ್ವತಂತ್ರ ನೆಲೆ ಇರುತ್ತದೆಯೆಂದು ಹೇಳಲಾಗದು. ದೇಶಗಳಲ್ಲಿ ಮೇಲುಗೈ ಪಡೆಯುವ ರಾಜಕೀಯ ಶಕ್ತಿಗಳ ನೀತಿ ನಿರೂಪಣೆಗೆ ಅನುಗುಣವಾಗಿ ವೈಜ್ಞಾನಿಕ ಶೋಧದ ದಿಕ್ಕು ನಿಯಂತ್ರಣಕ್ಕೊಳಪಡುವ ಅನಿವಾರ್ಯದಲ್ಲಿ ನಾವಿದ್ದೇವೆ. ರಾಜಕೀಯಾಧಿಕಾರದ ಕೇಂದ್ರ ಶಕ್ತಿಗೆ ಅಣುಬಾಂಬು ಬೇಕೆಂದರೆ ವಿಜ್ಞಾನ ಅದರ ಆವಿಷ್ಕಾರಕ್ಕೆ ಶ್ರಮಿಸುತ್ತದೆ; ಕೃಷಿ ಮೂಲಕ್ಕೆ ಮಹತ್ವ ಕೊಟ್ಟರೆ ವಿಜ್ಞಾನದ ಶೋಧ ಆ ದಿಕ್ಕು ಹಿಡಿಯುತ್ತದೆ. ಇದು ಒಂದು ಮುಖ.

ವಿಚಿತ್ರವೆಂದರೆ ನಾವು ಯಾವುದನ್ನು ರಾಜಕೀಯ ಶಕ್ತಿಕೇಂದ್ರವೆಂದು ಭಾವಿಸುತ್ತೇವೋ, ಆ ಶಕ್ತಿಕೇಂದ್ರ ನಮ್ಮ ದೇಶದಲ್ಲೇ ಇರುತ್ತದೆಯೆಂಬ ಗ್ಯಾರಂಟಿಯಿಲ್ಲ. ಈ ರಾಜಕೀಯ ಶಕ್ತಿಯನ್ನು ನಿಯಂತ್ರಿಸುವ ಕೇಂದ್ರ ಅಮೆರಿಕಾದಲ್ಲಿರಬಹುದು; ಬ್ರಿಟನ್ನಿನಲ್ಲಿರಬಹುದು, ಅಂದರೆ ನಮ್ಮ ಮುಖ್ಯ ವೈಜ್ಞಾನಿಕ ಆವಿಷ್ಕಾರಗಳ ದಿಕ್ಕನ್ನು ನಿಯಂತ್ರಿಸುವ ಶಕ್ತಿ ಮುಂದುವರೆದ ರಾಷ್ಟ್ರಗಳ ರಾಜಕೀಯದಲ್ಲಿ ಕೇಂದ್ರೀಕೃತವಾಗಿದೆ. ಇದರ ಫಲವಾಗಿ, ಮುಂದು

ಮುಂದುವರೆದ ರಾಷ್ಟ್ರಗಳ ಆಧುನಿಕ - ವೈಜ್ಞಾನಿಕ ಮಾದರಿಗಳು ಹಿಂದುಳಿದ ಅಥವಾ ಅಭಿವೃದ್ಧಿಶೀಲ ರಾಷ್ಟ್ರಗಳ ಆದರ್ಶವಾಗಿ ಪರಿಭಾವಿಸುವ ವಿಪರ್ಯಾಸ ನಮ್ಮ ದುರಿಗಿದೆ. ಆದ್ದರಿಂದ ಮುಂದುವರೆದ ರಾಷ್ಟ್ರಗಳ ಮಾದರಿಗಳು ಆದರ್ಶಗಳಲ್ಲ, ಆತಂಕಗಳು ಎಂದು ಪರಿಗಣಿಸಿದಾಗ ಅಭಿವೃದ್ಧಿಶೀಲ ರಾಷ್ಟ್ರಗಳ ತಳಮುಳ ಅರ್ಥಪೂರ್ಣವಾಗುತ್ತದೆ. ಮುಂದುವರೆದ ರಾಷ್ಟ್ರಗಳ ಮಾದರಿಗಳನ್ನು ಸ್ಥಳೀಯ ಅಗತ್ಯಕ್ಕನುಗುಣವಾಗಿ ಅರಗಿಸಿಕೊಳ್ಳುವ ಅಂತಃಶಕ್ತಿ ಲಭ್ಯವಾಗುತ್ತದೆ. ಇಲ್ಲ ದಿದ್ದರೆ ಬಾಹ್ಯಶಕ್ತಿಯನ್ನೇ ಅಂತಃಶಕ್ತಿಯೆಂದು ಭ್ರಮಿಸಿ ಪ್ರಚುರಪಡಿಸುವ 'ಜಾಹಿರಾತುದೇಶ'ಗಳಾಗಿ ನಾವು ಮಾರ್ಪಡುತ್ತೇವೆ. ಬಹುಮುಖಿ ಸಾಮಾಜಿಕ ವಲಯವುಳ್ಳ ನಮ್ಮ ದೇಶದ ಅಭಿವೃದ್ಧಿಗೆ ವಿಜ್ಞಾನದ ಬಹುಮುಖತೆ ಅಗತ್ಯವೆಂಬುದನ್ನು ಮರೆತು ವಿಜ್ಞಾನದ ಏಕಮುಖತೆಗೆ ಮಾತನ್ನು ಮಾರಿಕೊಳ್ಳುತ್ತೇವೆ.

ವಿಜ್ಞಾನದ ಏಕಮುಖತೆ ನಮ್ಮ ಮುಂದಿರುವ ಒಂದು ಸಮಸ್ಯೆಯಾದರೆ "ವಿಜ್ಞಾನದ ಉದ್ಯಮೀಕರಣ" ಬಹುಮುಖ್ಯ ಆತಂಕವಾಗಿದೆ. ಹಾಗೆ ನೋಡಿ ದರೆ, ವಿಜ್ಞಾನದ ಉದ್ಯಮೀಕರಣವು ಈಗ ಒಂದು ಅಂತರಾಷ್ಟ್ರೀಯ ಆತಂಕ. ಯಾಕೆಂದರೆ, ಇಂದು, ಮುಂದುವರೆದ ಮತ್ತು ಹಿಂದುಳಿದ ರಾಷ್ಟ್ರಗಳನ್ನು ಏಕ ಕಾಲಕ್ಕೆ 'ಉದ್ಯಮ'ದ ನೆಲೆಗಳು ನಿಯಂತ್ರಿಸುತ್ತಿವೆ. ಯಾವ ಉದ್ಯಮವು ಯಾವ ಕಾಲದಲ್ಲಿ ಜಾಹಿರಾತಿನ ಶಕ್ತಿಯನ್ನು ಪಡೆದು ವೈಭವೀಕರಿಸಲ್ಪಡು ತ್ತದೆಯೋ, ಆ ಉದ್ಯಮ 'ಅಂತರ ರಾಷ್ಟ್ರೀಯ ಅನಿವಾರ್ಯ' ಎಂಬ ಖ್ಯಾತಿಯನ್ನು ಪಡೆಯುತ್ತದೆ. ಮಾಹಿತಿ ತಂತ್ರಜ್ಞಾನವೂ ಇದಕ್ಕೆ ಹೊರತಾ ಗಿಲ್ಲ. ಯಾವುದೇ ತಂತ್ರಜ್ಞಾನ ಉದ್ಯಮೀಕರಣ ಹಾಗೂ ವೈಭವೀಕರಣಗಳಿಗೆ ಒಳಗಾದಾಗ ಉಂಟಾಗುವ ಆತಂಕಗಳನ್ನು ನಾವು ಎದುರಿಸದೆ ಕೇವಲ ಏಕ ಮುಖಿಗಳಾಗುವ ಕೈಂಕರ್ಯಕ್ಕೆ ಒಳಗಾಗಬಾರದು ಎಂಬ ಎಚ್ಚರ ಅಗತ್ಯ.

ಇಪ್ಪತ್ತನೇ ಶತಮಾನವನ್ನೂ ಪ್ರವೇಶ ಮಾಡದೆ ಇರುವ ಕೋಟ್ಯಾಂತರ ಜನರುಳ್ಳ ಬಹುಮುಖೀ ಸಮಾಜಕ್ಕೆ ಇಪ್ಪತ್ತೊಂದನೆ ಶತಮಾನದ ಹೆಸರಿನಲ್ಲಿ ಏಕಮುಖೀ ಚಿಂತನೆಯನ್ನು ಹೇರುವ ಮುಂದುವರೆದ ರಾಷ್ಟ್ರಗಳ 'ಉದ್ಯಮೀ ಕರಣದ ಹುನ್ನಾರ'ವನ್ನು ನಾವು ಅರ್ಥ ಮಾಡಿಕೊಳ್ಳಬೇಕು. ನಮ್ಮ ಅಗತ್ಯಕ್ಕೆ ಅನುಗುಣವಾಗಿ. ಆಧುನಿಕ ವಿಜ್ಞಾನ-ತಂತ್ರಜ್ಞಾನಗಳನ್ನು ಅಳವಡಿಸಿಕೊಂಡು ಜನಮುಖಿಯಾಗಬೇಕು. ಇಲ್ಲದಿದ್ದರೆ ಮುಂದುವರೆದ ರಾಷ್ಟ್ರಗಳ ವಿಜ್ಞಾನದ ಏಕಮುಖತೆ ಮತ್ತು ಹಿಂದುಳಿದ ರಾಷ್ಟ್ರಗಳ ಅಭಿವೃದ್ಧಿಯ ಬಹುಮುಖತೆಗಳ ನಡುವೆ ದೊಡ್ಡ ಕಂದಕವೇರ್ಪಡುತ್ತದೆ.

ಆಗ ನಾವು ಅಭಿವೃದ್ಧಿಯ ಹುಸಿ ಮಾದರಿಗಳಲ್ಲಿ ಹೊಸ ವರ್ಣಾಶ್ರಮ

ಸ್ಥಾಪಿಸುವ ಅಪಾಯವಿದೆ. ಯಾಕೆಂದರೆ ನಮ್ಮಲ್ಲಿ ಅಕ್ಷರವಂಚಿತ ಲಕ್ಷ ಲಕ್ಷ ಜನರು ಮಾತೃಭಾಷೆಗೂ ಮಾತಾಗಲಾಗದ ಮೂಕ ಸಂಸ್ಕೃತಿಯ ಪ್ರತೀಕವಾಗಿ ಬದುಕುತ್ತಿದ್ದಾರೆ. ಮೂಕ ಸಂಸ್ಕೃತಿಗೆ ಮಾತಾಗುವುದೇ ಪ್ರಜಾಪ್ರಭುತ್ವದ ಪ್ರಧಾನ ಆಶಯ. ಈ ಆಶಯಕ್ಕೆ ಆಧುನಿಕ ವಿಜ್ಞಾನ - ತಂತ್ರಜ್ಞಾನ ಸ್ಪಂದಿಸಬೇಕು. ಮೇಲ್ವರ್ಗದ ಮುಂದುವರೆದ ವೈಜ್ಞಾನಿಕ ಮಾದರಿಗಳನ್ನು ಮಧ್ಯಮವರ್ಗ ಹಾಗೂ ಕೆಳವರ್ಗದ ಮತ್ತು ಹಿಂದುಳಿದ ಜೀವನ ಮಾದರಿಗಳಿಗೆ ಅಳವಡಿಸುವುದು ಸುಲಭದ ಕೆಲಸವಲ್ಲ. ಸ್ವಲ್ಪ ಆಯ ತಪ್ಪಿದರೂ ಹೊಸ ವರ್ಣಾಶ್ರಮ ಧರ್ಮಕ್ಕೆ ಹಾದಿಯಾಗುವ ಆತಂಕ ಎದುರಾಗುತ್ತದೆ.

ಹೀಗೆಂದು ಅಭಿವೃದ್ಧಿಶೀಲ – ಹಿಂದುಳಿದ ದೇಶಗಳು ತಮಗೆ ತಾವೇ ದ್ವೀಪಗಳಾಗುವ ಸನ್ನಿವೇಶದಲ್ಲೂ ನಾವಿಲ್ಲ. ಆದ್ದರಿಂದ ರಾಜಕೀಯ ನೆಲೆಗಳನ್ನು ಮೀರಿ ಬೆಳೆಯುತ್ತಿರುವ ವಿಜ್ಞಾನದ ಏಕಮುಖತೆ ಮತ್ತು ಉದ್ಯಮೀಕರಣದ ಸವಾಲುಗಳನ್ನು ಸರಿಯಾಗಿ ಎದುರಿಸುತ್ತ ಜನಸಾಮಾನ್ಯರ ಆಶಯಗಳಿಗೆ ಅಳವಡಿಸುವ ಸಿದ್ಧತೆ ಇಂದು ಮುಖ್ಯವಾಗಿದೆ. ನಾಡಿನ ಜನಭಾಷೆ ಮತ್ತು ಜನಸಂಸ್ಕೃತಿಗಳನ್ನು ಉತ್ತೇಜಿಸುವ ವಿಧಾನಕ್ಕೆ ಆಧುನಿಕ ತಂತ್ರಜ್ಞಾನ ಪೂರಕವಾಗಬೇಕಾಗಿದೆ. ಆದರೆ, ಇಂದು ಮಾಹಿತಿ ತಂತ್ರಜ್ಞಾನದ ಹೆಸರಿನಲ್ಲಿ ನಡೆಯುತ್ತಿರುವ ಪ್ರಚಾರದ ಮಾದರಿಯನ್ನು ನೋಡಿದರೆ ಜನಸಾಮಾನ್ಯರ ಆಶೋತ್ತರಗಳ ಬಗ್ಗೆ ಆಸಕ್ತಿಯಿರುವಂತೆ ಕಾಣುವುದಿಲ್ಲ. ಮಾಹಿತಿ ತಂತ್ರಜ್ಞಾನದ ಉದ್ಯಮಪತಿಗಳು ಮತ್ತು ಅದಕ್ಕೆ ದಾಸರಂತೆ ವರ್ತಿಸುತ್ತಿರುವ ನೌಕರಶಾಹಿಯಿಂದ ಜನಸಾಮಾನ್ಯರಿಂದ ಆಯ್ಕೆಯಾದ ಸರ್ಕಾರಗಳೂ ಹಾದಿ ತಪ್ಪುತ್ತಿವೆ; ಭ್ರಮೆಗಳನ್ನು ಬಿತ್ತುತ್ತಿವೆ.

ಮಾಹಿತಿ ತಂತ್ರಜ್ಞಾನಕ್ಕೆ ಕನ್ನಡತನ ತರುವ ಬದಲು ಜನಸಾಮಾನ್ಯರಿಗೆ ಅಂಗ್ಲತನದ ಭ್ರಮೆ ಹಿಡಿಸುವ ಪ್ರಯತ್ನ ಪೂರ್ಣಪ್ರಮಾಣದಲ್ಲಿ ನಡೆಯುತ್ತಿದೆ. ಜನಸಾಮಾನ್ಯರು ಆಂಗ್ಲಭಾಷೆಯನ್ನು ಕಲಿಯಬಾರದೆಂದಾಗಲಿ, ಅದರ ಬಗ್ಗೆ ಪರಿಣತಿ ಪಡೆಯಬಾರದೆಂದಾಗಲಿ ನಾನು ಹೇಳುವುದಿಲ್ಲ. ಆದರೆ ಮಾಹಿತಿ ತಂತ್ರಜ್ಞಾನವೆಂದರೆ ಆಂಗ್ಲಭಾಷೆ ಮಾತ್ರ ಎಂಬ ಭ್ರಮೆಯನ್ನು ಬಿತ್ತುವ ಮೂಲಕ ಉದ್ಯಮಪತಿಗಳು ಘೋರ ಅಪರಾಧವನ್ನು ಮಾಡುತ್ತಿದ್ದಾರೆ. ರಾಷ್ಟ್ರೀಯ ಅಂತರರಾಷ್ಟ್ರೀಯ ಮಾಹಿತಿ ತಂತ್ರಜ್ಞಾನ ಬಳಕೆಗೆ ಆಂಗ್ಲಭಾಷೆಯ ಅಗತ್ಯವನ್ನು ಒಪ್ಪಿ ಆಂತರಿಕ ಆಡಳಿತ ಮತ್ತು ಉಪಯೋಗದಲ್ಲಿ ಕನ್ನಡಕ್ಕೆ ಆದ್ಯತೆ ಮಾತ್ರವಲ್ಲ ಕನ್ನಡ ಕಡ್ಡಾಯ ಎಂಬ ಸ್ಪಷ್ಟ ನಿಲುವು ತಾಳದ ನೌಕರಶಾಹಿ ಮತ್ತು ಸರ್ಕಾರಗಳ ತಪ್ಪು ಹೆಜ್ಜೆ ಕರ್ನಾಟಕವನ್ನು ಅಭಿವೃದ್ಧಿಯತ್ತ ಕೊಂಡೊಯ್ಯುವ ಬದಲು ಅಂತಃಶಕ್ತಿಯನ್ನು ಕುಗ್ಗಿಸುತ್ತಿದೆ. ಈಗಾಗಲೇ

ಆಂಗ್ಲಭಾಷೆಯಲ್ಲಿ ತೇರ್ಗಡೆ ಹೊಂದಲು ಕಡುಕಷ್ಟಪಡುತ್ತಿರುವ ನಗರ ಮತ್ತು ಗ್ರಾಮೀಣ ಪ್ರದೇಶದ ಬಡವರ್ಗದ ವಿದ್ಯಾರ್ಥಿಗಳ ತಲೆಯ ಮೇಲೆ ಭ್ರಮೆಯ ಬಂಡೆ ಹಾಕಿ 'ಅಭಿವೃದ್ಧಿಯ ಆನಂದ' ಪಡಲಾಗುತ್ತಿದೆ. ಆದರೆ ಮೇಲ್/ಮತ್ತು ಮಧ್ಯಮ ವರ್ಗದಿಂದ ಕೆಳಗಿರುವವರೆಲ್ಲ ಈಗ ಕೀಳರಿಮೆಯಿಂದ ನರಳತೊಡಗಿದ್ದಾರೆ.

ಮಾಹಿತಿ ತಂತ್ರಜ್ಞಾನವನ್ನು ಅಗತ್ಯಕ್ಕೆ ತಕ್ಕಂತೆ ಕಲಿಯುವುದರಲ್ಲಿ ತಪ್ಪಿಲ್ಲ. ಆದರೆ ಈ ತಂತ್ರಜ್ಞಾನದ ಗುತ್ತಿಗೆದಾರರು ಭಾಷೆ, ಶಿಕ್ಷಣ, ಸಂಸ್ಕೃತಿಗಳ ದಿಕ್ಕನ್ನೇ ಬದಲಾಯಿಸಹೊರಟಿರುವುದು ಎಷ್ಟರಮಟ್ಟಿಗೆ ಸರಿ? ಇದರಿಂದ ಸಮಾಜದಲ್ಲಿ ಉಂಟಾಗುವ ಆತಂಕ ತಳಮಳಕ್ಕೆ ತಕ್ಕ ಉತ್ತರಗಳನ್ನು ಕಂಡುಕೊಳ್ಳದಿದ್ದರೆ ಉಂಟಾಗುವ ಅಸಮಾನತೆಯ ಆತಂಕ ಅಗಾಧವಾದುದು.

ಹಳ್ಳಿಶಾಲೆಗಳಿಗೆ ಕಂಪ್ಯೂಟರ್ ಕೊಡುವುದು, ಕಲಿಸುವುದು ಉತ್ತಮ ಹೆಜ್ಜೆಯಾದರೂ ಅದು ಅಂತಿಮ ಉತ್ತರವಲ್ಲ. ಯಾಕೆಂದರೆ ಸ್ಥಳೀಯ ಭಾಷೆ, ಸಂಸ್ಕೃತಿ ಶಿಕ್ಷಣಗಳ ಮೇಲೆ ಸವಾರಿ ಮಾಡದಂತೆ ಮಾಹಿತಿ ತಂತ್ರಜ್ಞಾನವನ್ನು ತಡೆದಿಲ್ಲ. ಹಾಗಾಗಿ ಅದು ಹೊಸ ಭ್ರಮೆಗಳನ್ನು ಹಳ್ಳಿ ಹಳ್ಳಿಗಳಲ್ಲಿ ಬಿತ್ತುತ್ತದೆ.

ಈಗ ಭಾಷೆಯ ಬಗ್ಗೆ ಬಿತ್ತುತ್ತಿರುವ ಭ್ರಮೆಯನ್ನೇ ತೆಗೆದುಕೊಳ್ಳೋಣ. ಮಾಹಿತಿ ತಂತ್ರಜ್ಞಾನದ ಗುತ್ತಿಗೆದಾರರು (ಪರಿಣತರಲ್ಲ) ಚೈನಾ, ಜಪಾನ್, ಜರ್ಮನಿ, ಮುಂತಾದ ದೇಶಗಳಲ್ಲಿ ಆಂಗ್ಲಭಾಷಾ ಮಾಧ್ಯಮಕ್ಕೆ ಆದ್ಯತೆ ಸಿಕ್ಕಿದ್ದು, ನಮ್ಮ ನಾಡಿನಲ್ಲೂ ಆಂಗ್ಲಭಾಷೆಗೇ ಆದ್ಯತೆ ಕೊಡಬೇಕೆಂದು ವಾದ ಮಂಡಿಸುತ್ತಿದ್ದಾರೆ. ವಾಸ್ತವವಾಗಿ ಈ ದೇಶಗಳಲ್ಲೂ ಆಂಗ್ಲಭಾಷೆಗೆ ದೇಶಭಾಷಗಳನ್ನು ಮೀರಿದ ಆದ್ಯತೆ ಸಿಕ್ಕಿಲ್ಲ. ಕಂಪ್ಯೂಟರ್ ತಂತ್ರಜ್ಞಾನವನ್ನು ತಂತಮ್ಮ ದೇಶಭಾಷೆಗೇ ಅಳವಡಿಸಿಕೊಂಡಿರುವ ಈ ದೇಶಗಳು ಹೊರ ರಾಷ್ಟ್ರಗಳಿಗೆ ತಂತ್ರಾಂಶಗಳನ್ನು ರಫ್ತು ಮಾಡುವ ಉದ್ದೇಶಕ್ಕಾಗಿ ಆಂಗ್ಲಭಾಷೆಯ ಪರಿಣಿತರನ್ನು ಸಿದ್ಧ ಮಾಡಿದ್ದಾರೆ. ಆಂಗ್ಲಭಾಷೆಯಲ್ಲಿ ಆಯ್ದವರಿಗೆ ಪರಿಣತಿ ಕೊಡುವ ಈ ಪದ್ಧತಿಯನ್ನು ಆಂಗ್ಲ ಮಾಧ್ಯಮ ಎಂಬಂತೆ ನಮಗೆ ತಪ್ಪಾಗಿ ತಿಳಿಸಲಾಗುತ್ತಿದೆ.

ತುಂಬಾ ಕಷ್ಟಕರವಾದ ಲಿಪಿಯುಳ್ಳ ಚೀನಿ ಭಾಷೆಯನ್ನು ಕಂಪ್ಯೂಟರ್ ತಂತ್ರಜ್ಞಾನಕ್ಕೆ ಯಶಸ್ವಿಯಾಗಿ ಅಳವಡಿಸಲಾಗಿದೆ. ಜರ್ಮನಿಯಲ್ಲಿ ಜರ್ಮನ್ ಕಂಪ್ಯೂಟರ್ ತಂತ್ರಜ್ಞಾನದ ಭಾಷೆ; ಜಪಾನಿನಲ್ಲಂತೂ ಸ್ಪಷ್ಟ ಭಾಷಾ ನೀತಿಯಿದೆ. ಆಂತರಿಕ ವ್ಯವಹಾರಕ್ಕೆಲ್ಲ ಜಪಾನಿ ಭಾಷೆಯ ಮಾಹಿತಿ ಸಾಫ್ಟ್‌ವೇರ್ ಇದೆ. ಉತ್ಪಾದನೆ ಮಾಡಿ ರಫ್ತು ಮಾಡಲು ಆಂಗ್ಲಭಾಷೆಯ ಪರಿಣತರಿದ್ದಾರೆ. ಈ ದೇಶಗಳ ವಿವೇಕವನ್ನು ಮರೆಮಾಚಿ ನಮಗೆ 'ಸುಳ್ಳು'

ಹೇಳಲಾಗುತ್ತಿದೆ. ಅಮೆರಿಕಾದಂಥ ಬಲಾಢ್ಯ ದೇಶಗಳ ಮಾದರಿಯನ್ನು ಅಸಮ ತೋಲನಗಳ ಆಗರವಾದ ನಮ್ಮ ಸಮಾಜಕ್ಕೆ ಏಕಾಏಕಿ ಅಳವಡಿಸುವ ಉದ್ಯಮದ ಒತ್ತಡವೇ ಮುಖ್ಯವಾಗುತ್ತಿದೆ.

ಆಂಗ್ಲ ಮಯಿ ಅಮೆರಿಕಾದಲ್ಲಿ ಮಾಹಿತಿ ತಂತ್ರಜ್ಞಾನದ ಫಲಾನುಭವಿಗಳು ಶೇ. ೬೦ ರಷ್ಟಿದ್ದರೆ ಇಂಡಿಯಾದಲ್ಲಿ ಶೇ. ೪ ರಿಂದ ೫ ಎಂದು ಅಂದಾಜು ಮಾಡಲಾಗಿದೆ. ಜನರ ನೆಲೆಯಿಂದ ನೋಡಿದಾಗ. ಅಮೇರಿಕಾದಲ್ಲಿ ಕಂಪ್ಯೂಟರಿನ ಅಂತರ್‌ಜಾಲದ ಬಳಕೆಯು ೩೨ನೇ ಸ್ಥಾನದಲ್ಲಿದ್ದರೆ ಜಪಾನಿನಲ್ಲಿ ಒಂದನೇ ಸ್ಥಾನದಲ್ಲಿದೆ. ಇದು ಇತ್ತೀಚಿನ ಎರಡು ತಿಂಗಳ ಸಮೀಕ್ಷೆಯ ಖಚಿತ ಮಾಹಿತಿ. ಅಂದರೆ ಸ್ಥಳೀಯ ಭಾಷೆಯಲ್ಲಿ ವೃದ್ಧಿಯಾದ ತಂತ್ರಾಂಶ ಮತ್ತು ಅಂತರ್ ಜಾಲದ ಉಪಯೋಗ ಪಡೆಯುವ ಜಪಾನ್ ಇಡೀ ಪ್ರಪಂಚದಲ್ಲಿ ಮೊದಲ ಸ್ಥಾನದಲ್ಲಿದೆ. ನಾವು ಮಾಹಿತಿ ತಂತ್ರಜ್ಞಾನದಲ್ಲಿ ಕರ್ನಾಟಕ ಮತ್ತು ಬೆಂಗಳೂರಿಗೆ ಪ್ರಪಂಚದಲ್ಲೇ ವಿಶಿಷ್ಟ ಸ್ಥಾನವಿದೆಯೆಂದು ಹೇಳುತ್ತೇವೆ. ಇದು ಉದ್ಯಮಕ್ಕೆ ಸಂಬಂಧಿಸಿದ ಸ್ಥಾನಮಾನವೇ ಹೊರತು ಭಾಷೆ, ಶಿಕ್ಷಣ, ಸಂಸ್ಕೃತಿಗಳ ನೆಲೆಯಲ್ಲಿ ಮಾಹಿತಿ ತಂತ್ರಜ್ಞಾನಕ್ಕೆ ದೊರಕಿದ ಸ್ಥಾನಮಾನವಲ್ಲ. ಈ ದಿಕ್ಕಿನಲ್ಲಿ ಅಗತ್ಯ ಕ್ರಮ ಕೈಗೊಂಡಾಗ ಮಾಹಿತಿ ತಂತ್ರಜ್ಞಾನಕ್ಕೆ ದೇಶೀಯ ಮಹತ್ವ ಬರುತ್ತದೆ. ಈಗ ಕರ್ನಾಟಕದ ಪಾಲಿಗಿರುವುದು ವಿದೇಶೀಯ ಮಹತ್ವ.

ನಮ್ಮ ಶಿಕ್ಷಣ ಕ್ಷೇತ್ರದ ಮೇಲೆ ಮಾಹಿತಿ ತಂತ್ರಜ್ಞಾನ ಒಂದು ಉದ್ಯಮ ವಾಗಿ ಕಬಂಧಬಾಹುಗಳನ್ನು ಚಾಚುತ್ತ ಶಿಕ್ಷಣ ನೀತಿಯ ದಿಕ್ಕನ್ನು ತನಗೆ ಬೇಕಾ ದಂತೆ ಬದಲಾಯಿಸಿಕೊಳ್ಳಲು ಹವಣಿಸುತ್ತಿದೆ. ಸರ್ಕಾರ ವಿವೇಕ ಮತ್ತು ಔಚಿತ್ಯ ಪ್ರಜ್ಞೆಯನ್ನು ಬಳಸದಿದ್ದರೆ ರಾಜ್ಯದ ಇಡೀ ಶಿಕ್ಷಣವು ಮಾಹಿತಿ ತಂತ್ರ ಜ್ಞಾನದ ಉದ್ಯಮ ನೀತಿಯಾಗಿ ಪರಿಣಮಿಸುತ್ತದೆ.

ಕಂಪ್ಯೂಟರ್ ತಂತ್ರಜ್ಞಾನದ ಪರಿಣತಿಯು ಶಿಕ್ಷಣ ನೀತಿಯ ಭಾಗವಾಗ ಬೇಕೆಂಬ ಬಗ್ಗೆ ಎರಡು ಮಾತಿಲ್ಲ. ಆದರೆ ಈಗ ಮಾಹಿತಿ ತಂತ್ರಜ್ಞಾನದ 'ಮಾರಾಟ' ವೇ ಮುಖ್ಯವಾಗುತ್ತಿದೆ. ಜ್ಞಾನಗೌಣವಾಗುತ್ತಿದೆ. ವಿಜ್ಞಾನದ ಅನೇಕ ಶಾಖೆಗಳನ್ನು ಕಲಿಸಿದಂತೆ ಕಂಪ್ಯೂಟರನ್ನು ಕಲಿಸುವ ಬದಲು ಅದೊಂದೇ ಜ್ಞಾನ, ಅಂದೊಂದೇ ವಿಜ್ಞಾನ ಎಂಬ ಭ್ರಮೆ ಮೂಡಿಸಲಾಗುತ್ತಿದೆ. ಕನ್ನಡವನ್ನು ಕಡ್ಡಾಯ ಮಾಡದೆಯೆ ಕಂಪ್ಯೂಟರನ್ನು ಕಡ್ಡಾಯ ಮಾಡಲು ಪ್ರಯತ್ನಿಸಲಾಗುತ್ತಿದೆ! 'ಶಿಕ್ಷಣವೆಂದರೆ ಕಂಪ್ಯೂಟರ್' ಎಂಬಂತೆ ಮಾನಸಿಕ ಒತ್ತಡ ನಿರ್ಮಿಸಲಾಗುತ್ತದೆ.

ಇದರಿಂದ ಇಡೀ ಶಿಕ್ಷಣ ಕ್ಷೇತ್ರ ಕೇವಲ ವೃತ್ತಿ ಶಿಕ್ಷಣವಾಗುವ ಅಪಾಯ ದತ್ತ ಸಾಗಿದೆ. ಒಂದು ಹಂತದವರೆಗೆ ಸಾಮಾನ್ಯ ಶಿಕ್ಷಣಕ್ಕೆ ಮಹತ್ವ ನೀಡಿ

ಅನಂತರ ಮಾಹಿತಿ ತಂತ್ರಜ್ಞಾನವನ್ನೂ ಒಳಗೊಂಡಂತೆ ವಿಜ್ಞಾನದ ವಿವಿಧ ಸಮಕಾಲೀನ ಶಾಖೆಗಳಲ್ಲಿ ಶಿಕ್ಷಣ ಕೊಡುವ ನೀತಿಯನ್ನು ರೂಪಿಸುವ ಬದಲು ಎಲ್ಲ ಕಡೆಗೂ ಒಂದೇ ಮಂತ್ರದಂಡವನ್ನು ಬಳಸಿ ಇತರ ಜ್ಞಾನಶಾಖೆಗಳನ್ನು ಬಗ್ಗು ಬಡಿಯಲಾಗುತ್ತಿದೆ. ಶಿಕ್ಷಣವೆಂದಲೆ ಕೇವಲ ಉದ್ಯೋಗ ಮುಖಿಯಲ್ಲ ಒಂದು ಹಂತದವರೆಗೆ ಪೂರ್ಣಜ್ಞಾನ ಮುಖಿಯಾಗಿರಬೇಕು; ಅನಂತರ ಉದ್ಯೋಗ ಮುಖಿಯಾಗಲಿ. ಅದನ್ನು ಬಿಟ್ಟು ಕಂಪ್ಯೂಟರ್ ಕಲಿತವರಿಗೆಲ್ಲ ಉದ್ಯೋಗ ಸಿಗುತ್ತದೆಂಬ ಭ್ರಮೆಹಿಡಿಸುವುದು ಮತ್ತು ಅದನ್ನು ಸಾಮಾನ್ಯ ಶಿಕ್ಷಣದ ಒಂದು ಮುಖ್ಯ ಭಾಗವಾಗಿಸುವದು ಸರಿಯೇ? ಇಲ್ಲದಿದ್ದರ ಒಮ್ಮೆ ಏರು ಪೇರಾದ ಪಠ್ಯಕ್ರಮವನ್ನು ಸರಿಪಡಿಸಲು ದಶಕಗಳೇ ಬೇಕಾಗುತ್ತದೆ. ಅದರಲ್ಲೂ ಭಾಷಾ ಕಲಿಕೆಯಲ್ಲಿ ವ್ಯತ್ಯಸ್ಥಗೊಳ್ಳುವ ಪಠ್ಯಕ್ರಮವನ್ನು ಸುಸ್ಥಿತಿಗೆ ತರುವ ಪ್ರಯತ್ನಕ್ಕೆ ಕಿಮ್ಮತ್ತು ಸಿಗುವುದೇ ಇಲ್ಲ.

ಭಾಷೆಯ ವಿಷಯಕ್ಕೆ ಬಂದಾಗ, ಮಾಹಿತಿ ತಂತ್ರಜ್ಞಾನದ ಉದ್ಯಮ ಪತಿಗಳು ಆಂಗ್ಲಮಾಧ್ಯಮವನ್ನು ಕಡ್ಡಾಯಗೊಳಿಸುವ ಒತ್ತಡವನ್ನು ವಿವಿಧ ವೇದಿಕೆಗಳ ಮೂಲಕ ಹೇರಹೊರಟಿದ್ದಾರೆ. ಅವರ ಆಶೋತ್ತರಕ್ಕಾಗಿ, ಬಡ ಪಾಯಿಗಳಾದ ಕೆಳ ವರ್ಗದವರ ಬಗ್ಗೆ ಕಾಳಜಿವಹಿಸಿದಂತೆ ಕಾಣಿಸಿಕೊಳ್ಳುತ್ತಿದ್ದಾರೆ. ಕೇವಲ ದೊಡ್ಡವರ ಮಕ್ಕಳೇ ಇಂಗ್ಲೀಷ್ ಕಲಿಯಬೇಕೆ? ಜವಾನನ ಮಗ, ಕೂಲಿಯ ಮಗ ಇಂಗ್ಲೀಷ್ ಕಲಿತು ಮುಂದೆ ಬರಬಾರದೆ ಎಂದೆಲ್ಲಾ ಪ್ರಶ್ನಿಸ ಲಾಗುತ್ತಿದೆ. ಈ ಪ್ರಶ್ನೆಗಳಿಗೆ ಕೆಲವು ರಾಜಕಾರಣಿಗಳೂ ದನಿಗೂಡಿಸುತ್ತಿ ದ್ದಾರೆ. ಮೇಲೆ ಹೇಳಿದ ವರ್ಗಗಳ ಮಕ್ಕಳು ಇಂಗ್ಲೀಷ್ ಕಲಿಯಬಾರ ದೆಂದು ಯಾರು ಹೇಳುತ್ತಾರೆ? ಇವರೆಲ್ಲರೂ ಇಂಗ್ಲೀಷನ್ನು ಒಂದು ಭಾಷೆಯಾಗಿ ಚೆನ್ನಾಗಿ ಕಲಿಯಲು ಸರ್ವ ಪ್ರೋತ್ಸಾಹ ಇರಲಿ, ಆದರೆ ಇವರಿಗೆ 'ಇಂಗ್ಲೀಷ್ ಕಲಿಸುವ' ಕ್ರಿಯೆಯ ಪ್ರಾಮಾಣಿಕತೆಗಿಂತ, ಅದನ್ನು ನೆಪಮಾಡಿ ಕೊಂಡು ಶಿಕ್ಷಣ ಮಾಧ್ಯಮದ ನೀತಿಯನ್ನು ಬದಲಾಯಿಸುವುದು ನಿಲ್ಲಬೇಕಾಗಿದೆ. ಹೀಗೆ ಬದಲಾಯಿಸಿದರೆ ನಾಯಿಕೊಡೆಯಂತೆ ಹುಟ್ಟುವ ಆಂಗ್ಲ ಮಾಧ್ಯಮ ಶಾಲೆಗಳಿಗೆ ಡೊನೇಷನ್ ಕೊಟ್ಟು ಥಕ್ಕನೆ ಪ್ರಯೋಜನ ಪಡೆಯುವವರು ಜವಾನರ ಮಕ್ಕಳಲ್ಲ; ಕೂಲಿಕಾರರ ಮಕ್ಕಳಲ್ಲ; ಆರ್ಥಿಕ ಮತ್ತು ಸಾಮಾಜಿಕ ಶಕ್ತಿಯಿರುವವರು.

ಇಷ್ಟಕ್ಕೂ ಆಂಗ್ಲಮಾಧ್ಯಮದಲ್ಲಿ ಓದಿದವರೆಲ್ಲ ಆಂಗ್ಲ ಭಾಷೆಯಲ್ಲಿ ಪೂರ್ಣ ಪರಿಣಿತಿ ಪಡೆಯುತ್ತಾರೆಂದು ಹೇಳಲಾಗದು. ಆಂಗ್ಲ ಭಾಷೆಯನ್ನು ಒಂದು ಭಾಷೆಯಾಗಿ ಕಲಿಸುತ್ತಲೇ ಪರಿಣತಿ ಪಡೆಯುವಂತೆ ಮಾಡಬಹುದು. ಇದಕ್ಕಾಗಿ ಆಂಗ್ಲಭಾಷೆಯ ಕಲಿಕೆಯ ವಿಧಾನವನ್ನು ಬದಲಾಯಿಸಿ ಜಗತ್ತಿನೊಂದಿಗೆ

ವ್ಯವಹರಿಸುವುದಕ್ಕೆ ಬೇಕಾದ ಪರಿಣತಿಯನ್ನು ಕೊಡಬೇಕು.

ಮಾಹಿತಿ ತಂತ್ರಜ್ಞಾನದ ಕೆಲವು ಉದ್ಯಮಿಗಳು ತಾವು ಕೆಳವರ್ಗದ ಜನರ ಬಗ್ಗೆ ತೋರಿಸುತ್ತಿರುವ ಕಾಳಜಿಯ ಸಾಂಕೇತಿಕ ಸಮರ್ಥನೆಗಾಗಿ ಒಂದು ಕೆಲಸ ಮಾಡಬಹುದು. ಈಗಾಗಲೇ ಆಂಗ್ಲ ಮಾಧ್ಯಮದಲ್ಲಿ ಓದಿ ನಿರುದ್ಯೋಗಿಗಳಾಗಿ ಇರುವ ಕೆಳ ವರ್ಗದವರನ್ನು ಆದ್ಯತೆಯ ಮೇಲೆ ತಮ್ಮ ಕಂಪನಿಗಳಲ್ಲಿ ಕೆಲಸಕ್ಕೆ ಸೇರಿಸಿಕೊಂಡು ಸಾಮಾಜಿಕ ಕಾಳಜಿಗೆ ಸಮರ್ಥನೆ ಕೊಡಬಾರದೇಕೆ? ಮಾಹಿತಿ ತಂತ್ರಜ್ಞಾನದ ಯಶಸ್ವಿ ಉದ್ಯಮಿಯೊಬ್ಬರ ಪ್ರಕಾರವೇ – ಈ ಕ್ಷೇತ್ರದಲ್ಲಿ ಏಳೆಂಟು ವರ್ಷಗಳವರೆಗೆ ಅಪಾರ ಉದ್ಯೋಗಾವಕಾಶವಿದೆ. ಹಾಗಿದ್ದಲ್ಲಿ ಕೆಳ ವರ್ಗ ಮತ್ತು ಹಿಂದುಳಿದ ವರ್ಗಗಳ ಮಕ್ಕಳು ಈಗ ಆಂಗ್ಲ ಪ್ರಾಥಮಿಕ ಶಾಲೆಗೆ ಸೇರಿ ಪರಿಣತರಾಗಿ ಹೊರ ಬರುವ ವೇಳೆಗೆ ಮಾಹಿತಿ ತಂತ್ರಜ್ಞಾನದ ಉದ್ಯೋಗಾವಕಾಶದ ಬಾಗಿಲು ಮುಚ್ಚಿರುತ್ತದೆ. ಆದ್ದರಿಂದಲೇ ಈಗ ಲಭ್ಯ ಇರುವ ಹಿಂದುಳಿದ ಹಾಗೂ ಕೆಳವರ್ಗದ ಆಂಗ್ಲ ಪರಿಣತ ನಿರುದ್ಯೋಗಿಗಳಿಗೆ ಆದ್ಯತೆಯ ಮೇಲೆ ಉದ್ಯೋಗಾವಕಾಶ ಕೊಡಿ ಎಂದು ನಾನು ಪ್ರತಿಪಾದಿಸಿದ್ದು. ಇದೊಂದು ವಿತಂಡವಾದದಂತೆ ಕೆಲವರಿಗೆ ಕಾಣಬಹುದಾದರೂ ಹುನ್ನಾರಗಳನ್ನು ಹೊರಹಾಕಲು ಅಥವಾ ಹುನ್ನಾರವಿಲ್ಲವೆಂದು ಸಾಧಾರಗೊಳಿಸಲು ಈ ವಾದ ಅನಿವಾರ್ಯವೆಂದು ನನ್ನ ಭಾವನೆ.

ಇತ್ತೀಚೆಗೆ ಸರ್ಕಾರದ ಕಾರ್ಯದರ್ಶಿಯೊಬ್ಬರು ನನಗೆ ಹೇಳಿದರು 'ನೋಡಿ, ಸರ್, ನಮ್ಮ ರಾಜ್ಯದ ಬಡತನ ಮತ್ತು ನಿರುದ್ಯೋಗ ನಿವಾರಣೆಗೆ ಇರೋ ಒಂದೇ ಒಂದು ಅವಕಾಶ ಅಂದ್ರೆ, ಮಾಹಿತಿ ತಂತ್ರಜ್ಞಾನ, ಇದು ಕಟ್ಟ ಕಡೆಯ ಅವಕಾಶ. ಇದನ್ನು ಈಗ ಬಳಸಿಕೊಳ್ಳದೆ ಹೋದರೆ ಇನ್ನು ಯಾವತ್ತೂ ಬಡತನ ಹೋಗಲ್ಲ; ನಿರುದ್ಯೋಗ ನಿವಾರಣೆ ಆಗೋಲ್ಲ."

ಎಂಥ ರೋಮಾಂಚನಕಾರಿ ಹೇಳಿಕೆ! ರಾಜ್ಯದ ಬಡತನ ಮತ್ತು ನಿರುದ್ಯೋಗ ನಿವಾರಣೆಗೊಂಡು ಸುಖೀ ಸಮಾಜ ನಿರ್ಮಾಣವಾಗುವುದಾದರೆ ಯಾರಿಗೆ ಬೇಡ? ಆದರೆ ಕಟುವಾಸ್ತವದ ಅರಿವಿದ್ದವರ್‍ಯಾರು ಇಂಥ ಹೇಳಿಕೆಗಳಿಂದ ರೋಮಾಂಚನ ಗೊಳ್ಳುವುದಿಲ್ಲ. ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ಹೆಚ್ಚು ಉದ್ಯೋಗಾವಕಾಶ ಗಳಿರುವುದು ನಿಜ. ಆದರೆ ಇದೊಂದೇ ಸರ್ವರೋಗ ನಿವಾರಕ ಸಂಜೀವಿನಿಯಲ್ಲ.

ಮಾಹಿತಿ ತಂತ್ರಜ್ಞಾನವನ್ನು ಸಮಕಾಲೀನ ಮಹತ್ವದ ಘಟಕವಾಗಿ ನಾವು ಸ್ವೀಕರಿಸಬೇಕೇ ಹೊರತು ಮಾಯೀಕವಿಸುವ ಬಜಾರಾಗಿ ಪರಿವರ್ತಿಸಬೇಕಿಲ್ಲ.

ಉದ್ಯೋಗಾವಕಾಶದಲ್ಲೂ ಮಾಹಿತಿ ತಂತ್ರಜ್ಞಾನದ ಕಂಪನಿಗಳಿಗೆ ಸಾಕಷ್ಟು ಲಾಭವಿದೆ. 'ಬಾಡಿ ಶಾಪಿಂಗ್''ನಿಂದ ಈ ಕಂಪನಿಗಳು ತಮ್ಮ ಗರಿಷ್ಠ ಪಾಲು

ಪಡೆಯುತ್ತವೆಯೆಂದು ಹೇಳಲಾಗುತ್ತಿದೆ. 'ಬಾಡಿ ಶಾಪಿಂಗ್' ಎಂದರೆ ಕಂಪನಿಗಳು ನೇಮಕ ಮಾಡಿಕೊಂಡ ಉದ್ಯೋಗಿಗಳನ್ನು ಹೊರದೇಶದ ಕಂಪನಿಗೆ ಕಳಿಸಿಕೊಡುವ ಪದ್ಧತಿ. ಹೊರದೇಶದ ಕಂಪನಿಗಳು ಈ ಉದ್ಯೋಗಿಗಳಿಗೆ ಕೊಡುವ ಸಂಭಾವನೆಯಲ್ಲಿ ಅರ್ಧಪಾಲು ನಮ್ಮ ದೇಶದ ಈ ಕಂಪನಿಗೆ ಸಂದಾಯವಾಗುತ್ತದೆ. ಪಾಲಿನ ಪ್ರಮಾಣದಲ್ಲಿ ಅಲ್ಪಸ್ವಲ್ಪ ವ್ಯತ್ಯಾಸವಿರಬಹುದಾದರೂ 'ಬಾಡಿ ಶಾಪಿಂಗ್'ನಿಂದ ಕಂಪನಿಗಳು ಲಾಭವನ್ನಾಡುತ್ತಿವೆಯೆಂಬುದು ಆದೇ ವಲಯದ ಖಚಿತ ಮಾತು. 'ಬಾಡಿ ಶಾಪಿಂಗ್'ನ ಕಾರಣಕ್ಕೂ ಈ ಉದ್ಯಮಪತಿಗಳು ಆಂಗ್ಲ ಮಾಧ್ಯಮದ ವಕ್ತಾರರಾಗಿರಲು, ಸಾಧ್ಯ ಅಥವಾ ಹೊರ ರಾಜ್ಯದಿಂದ ಬರುವ ಮಾಹಿತಿ ತಂತ್ರಜ್ಞಾನ ತಜ್ಞರ ಮಕ್ಕಳಿಗಾಗಿ ಹೊಸ ಆಂಗ್ಲ ಮಾಧ್ಯಮ ಶಾಲೆಗಳನ್ನು ತೆರೆಯಲು ಇವರಿಗೆ ಸರ್ಕಾರದ ಅನುಮತಿ ಬೇಕಾಗಿದ್ದು ಅದಕ್ಕಾಗಿ ಆಂಗ್ಲ ಮಾಧ್ಯಮದ ಪರವಾಗಿ 'ತಾತ್ವಿಕ' ಪ್ರತಿಪಾದನೆ ಮಾಡುತ್ತಿರಬಹುದು. ಮೇಲ್ನೋಟಕ್ಕೆ ನನ್ನ ಈ ಮಾತು ದೂರದ ಊಹೆ ಎನ್ನಿಸಬಹುದು. ಆದರೆ ನನಗೆ ಬಂದಿರುವ ಒಂದು ಮಾಹಿತಿಯ ಪ್ರಕಾರ 'ಮಾಹಿತಿ ತಂತ್ರಜ್ಞಾನದ ಟಾಸ್ಕ್‌ಫೋರ್ಸ್' ಸಭೆಯಲ್ಲಿ ಈ ವಿಚಾರ ಚರ್ಚೆಯಾಗಿದೆ. ಈಗಿನ ನೀತಿಯ ಪ್ರಕಾರ ಸರ್ಕಾರವು ಕನ್ನಡ ಮಾಧ್ಯಮದ ಪ್ರಾಥಮಿಕ ಶಾಲೆಗಳ ಪ್ರಾರಂಭಕ್ಕೆ ಮಾತ್ರ ಅನುಮತಿ ಕೊಡುತ್ತಿದೆ. ಈಗಿರುವ ಆಂಗ್ಲ ಮಾಧ್ಯಮ ಶಾಲೆಗಳಲ್ಲಿ ಡೊನೇಷನ್ ಜಾಸ್ತಿ; ಡೊನೇಷನ್ ಕೊಟ್ಟರೂ ಪ್ರತಿಷ್ಠಿತ ಆಂಗ್ಲ ಮಾಧ್ಯಮ ಶಾಲೆಗಳಲ್ಲಿ ಸೀಟು ಸಿಗುವುದಿಲ್ಲವೆಂಬ ಅನುಮಾನ. ಸೀಟು ಸಿಕ್ಕಿದರೂ ಸಂಖ್ಯೆಯ ಒತ್ತಡದಿಂದ ನಿರೀಕ್ಷಿತ ಮಟ್ಟದ ಶಿಕ್ಷಣ ದೊರೆಯಲಾರದೆಂಬ ಅಪನಂಬಿಕೆ. ಆದ್ದರಿಂದ ಹೊರರಾಜ್ಯದಿಂದ ಮಾಹಿತಿ ತಂತ್ರಜ್ಞಾನದ 'ಪ್ರತಿಭಾವಂತರನ್ನು' ಆಕರ್ಷಿಸಲು ಮತ್ತು ಬಂದವರಿಗೆ ಅನುಕೂಲ ಮಾಡಿಕೊಡಲು ಸರ್ಕಾರವು ತನ್ನ ಶಿಕ್ಷಣ ಮಾಧ್ಯಮದ ನೀತಿಯನ್ನು ಸಡಿಲಿಸಿ ಹೊಸ ಆಂಗ್ಲ ಮಾಧ್ಯಮ ಶಾಲೆಗಳಿಗೆ ಅನುಮತಿ ಕೊಡುವಂತೆ ಮಾಡಬೇಕು. ಇದಿಷ್ಟು ಟಾಸ್ಕ್‌ಫೋರ್ಸ್ ಸಭೆಯಲ್ಲಿ ನಡೆದ ಚರ್ಚೆಯೆಂದು ಬಲ್ಲ ಮೂಲದ ಮಾಹಿತಿ. ಒಂದು ವೇಳೆ ಇದು ನಿಜವಿದ್ದಲ್ಲಿ 'ಕೆಳವರ್ಗದವರ ಹೆಸರಿನಲ್ಲಿ ನಡೆಸುವ ಮೇಲ್ವರ್ಗದವರ ಮೇಲಾಟ' ಎನ್ನಬೇಕಾಗುತ್ತೆ. (ಸದ್ಯಕ್ಕೆ ಈ ಮಟ್ಟಿಗೆ ಇಳಿದಿರಲಾರರು ಎಂದೇ ಭಾವಿಸೋಣ!)

ಮಾಹಿತಿ ತಂತ್ರಜ್ಞಾನದ ಬಗ್ಗೆ ಬರುತ್ತಿರುವ ಟೀಕೆಗಳಿಗೆ ಉತ್ತರವಾಗಿ 'ದೂರವಾಣಿಗಳು ದೂರದರ್ಶನಗಳ ಆಗಮನವಾದ ಹೊಸದರಲ್ಲಿ ಇದೇ ರೀತಿ ವಾದ ವಿವಾದಗಳು ನಡೆದು ಕಡೆಗೆ ಅವುಗಳು ಮನೆ ಮನೆಯ ಅನಿವಾರ್ಯಗಳಾದವು' ಎಂಬ ಪ್ರತಿಪಾದನೆಯೂ ನಡೆಯುತ್ತಿದೆ. ಮಾಹಿತಿ ತಂತ್ರಜ್ಞಾನಕ್ಕೂ ದೂರದರ್ಶನ ದೂರವಾಣಿಯಂಥ 'ಮಾಧ್ಯಮ'ಗಳಿಗೂ ವ್ಯತ್ಯಾಸವಿದೆ. ದೂರ

ದರ್ಶನದಿಂದ ಕೆಲವು ಕೆಟ್ಟ ಪರಿಣಾಮಗಳಿಸಬಹುದಾದರೂ ಕುಟುಂಬ ಮನ ರಂಜನೆ ಮಾಧ್ಯಮವಾಗಿ ಅದಕ್ಕೆ ಮನ್ನಣೆ ಸಿಕ್ಕಿದೆ. ದೂರವಾಣಿ ಉಪಯುಕ್ತ ಸಂಪರ್ಕ ಸಾಧನವಾಗಿದೆ. ಈ ಮಾಧ್ಯಮ ಹಾಗೂ ಸಾಧನಗಳು ಸರ್ಕಾರವನ್ನೇ ನಿಯಂತ್ರಿಸಿ ನೀತಿ ನಿರೂಪಣೆಯಲ್ಲಿ ಪ್ರಮುಖ ಪಾತ್ರ ವಹಿಸುವಷ್ಟು ಪ್ರಭಾವ ಶಾಲಿಯಾಗಿಲ್ಲ. ಸರ್ಕಾರವೇ ಇವುಗಳನ್ನು ನಿಯಂತ್ರಣದಲ್ಲಿಡಲು ಪ್ರಯತ್ನಿಸುತ್ತ ಬಂದಿದೆ. ಆದರೆ ಮಾಹಿತಿ ತಂತ್ರಜ್ಞಾನದ ಉದ್ಯಮಿಗಳಿಗೆ ಸರ್ಕಾರದ ನೀತಿ ನಿರೂಪಣೆಯಲ್ಲಿ ಪ್ರಭಾವ ಬೀರುವಷ್ಟು ಶಕ್ತಿ ಲಭ್ಯವಾಗುತ್ತಿದೆ.

ಮಾಹಿತಿ ತಂತ್ರಜ್ಞಾನ ತನಗೆ ತಾನೇ ಸಕಾರಾತ್ಮಕ ವಾದುದಲ್ಲ. ಅದನ್ನು ಸರ್ವರೋಗ ಸಂಜೀವಿನಿಯೆಂಬಂತೆ ಬಿಂಬಿಸುವುದು ಎಷ್ಟು ಅಪಾಯಕಾರಿಯೋ ಪೂರ್ಣ ಸಕಾರಾತ್ಮಕವೆಂದು ಪ್ರತಿಪಾದಿಸುವುದು ಅಷ್ಟೇ ಅಪಾಯಕಾರಿ. ಮಾಹಿತಿ ತಂತ್ರಜ್ಞಾನವನ್ನು ಬಳಸಿಕೊಳ್ಳುವುದರಲ್ಲಿ ಅದರ ಮಹತ್ವ ಅಡಗಿದೆ. ಕಚೇರಿ ಗಳಲ್ಲಿ ಕಡತಗಳನ್ನು ಬಿಡುವುದಕ್ಕೆ ಸಾಧ್ಯವಿಲ್ಲವಾದರೂ ಅವುಗಳ ಮಾಹಿತಿಯನ್ನು ಕಂಪ್ಯೂಟರ್‌ನಲ್ಲಿ ಜೋಪಾನ ಮಾಡಬಹುದು. ಕೆಲವೇ ಸೆಕೆಂಡುಗಳಲ್ಲಿ ಬೇಕಾದ ಮಾಹಿತಿಯನ್ನು ಪಡೆಯಬಹುದು. ಜಗತ್ತಿನ ವಿವಿಧ ಜ್ಞಾನ ಶಾಖೆಗಳ ಜೊತೆಗೆ ಕೂತಲ್ಲೇ ಸಂಪರ್ಕ ಸಾಧಿಸಬಹುದು, ಆದರೆ ಸಮಾಜ, ಶಿಕ್ಷಣ, ಸಂಸ್ಕೃತಿ, ಭಾಷೆ, ಸರ್ಕಾರ - ಹೀಗೆ ಎಲ್ಲದರ ಮೇಲೂ ಸವಾರಿ ಮಾಡಲು ಅವಕಾಶವಾಗ ಬಾರದು ಎಂಬುದಷ್ಟೇ ನನ್ನ ಕಾಳಜಿ. ಅದು ಇವೆಲ್ಲದರ ಒಂದು ಭಾಗವಾಗಿ ಬೆಳೆಯಬೇಕೆ ಹೊರತು ಇವುಗಳೆಲ್ಲ ಅದರ ಭಾಗವಾಗಬಾರದು.

ಕೊನೆಯದಾಗಿ ಹೇಳುವುದಿಷ್ಟು: ಮಾಹಿತಿ ತಂತ್ರಜ್ಞಾನದ ಮಹತ್ವಕ್ಕೆ ಮನ್ನಣೆ ಕೊಡುತ್ತಲೇ ಅದರ ಇತಿಮಿತಿಗಳನ್ನು ಗೊತ್ತುಮಾಡದಿದ್ದರೆ ಇತಿಹಾಸ ನಮ್ಮನ್ನು ಕ್ಷಮಿಸುವುದಿಲ್ಲ. ★

ಓದುಗರಲ್ಲಿ ಮತ್ತು ಲೇಖಕರಲ್ಲಿ ಅರಿಕೆ

ಜನಪದ ವಿಚಾರದಲ್ಲಿ ಪ್ರಕಟಗೊಂಡಿರುವ ಲೇಖನಗಳಲ್ಲಿಯ ವಿಚಾರಗಳ ಬಗ್ಗೆ ಓದುಗರು ತಮ್ಮ ಅನಿಸಿಕೆ, ಅಭಿಪ್ರಾಯ ಇತ್ಯಾದಿಗಳನ್ನು ತಿಳಿಸಬೇಕಾಗಿ ಕೋರಿಕೆ ಅವುಗಳನ್ನು ಪ್ರಕಟಿಸಲಾಗುವುದು.
ಲೇಖಕರು ಸ್ವಂತ ವೈಚಾರಿಕ ಕೃತಿಗಳನ್ನೂ, ಅನುವಾದಿತ ಕೃತಿ ಗಳನ್ನೂ ಪ್ರಕಟಣೆಗಾಗಿ ಕಳುಹಿಸಬೇಕಾಗಿ ಕೋರಿಕೆ.

ಯುವಕರ ಪ್ರೇರಣಾ ಪುರುಷ ಜಯಪ್ರಕಾಶ್

- ಸಚ್ಚಿದಾನಂದಸಿಂಹ

೧೯೪೬ ರಲ್ಲಿ ಜಯಪ್ರಕಾಶರು ಕಾರಾಗೃಹದಿಂದ ಬಿಡುಗಡೆ ಹೊಂದಿ ಹೊರ ಬಂದಾಗ ದೇಶವು ಅವರಿಗೆ ಅಭೂತಪೂರ್ವ ಸ್ವಾಗತ ನೀಡಿತು. ಅವರು "ಭಾರತ ಬಿಟ್ಟು ಹೋಗಿ" ಚಳುವಳಿ ಮತ್ತು ಆಗಸ್ಟ್ 'ಕ್ರಾಂತಿಯ' ಹೀರೋ ಆಗಿದ್ದರು. ಬಿಡುಗಡೆಯ ನಂತರ ಅವರು ದೇಶದಲ್ಲಿ ಸಮಾಜವಾದಿ ಆಂದೋಲನವನ್ನು ಪುನಃ ಸಂಘಟಿಸುವ ಕೆಲಸ ವಹಿಸಿಕೊಂಡರು ಮತ್ತು ಈ ಕೆಲಸದಲ್ಲಿ ತಮ್ಮನ್ನು ಪೂರ್ಣವಾಗಿ ತೊಡಗಿಸಿಕೊಂಡರು. ಕಾಂಗ್ರೆಸ್ ಸಮಾಜವಾದಿ ಪಕ್ಷವು ಆಗಸ್ಟ್ ಕ್ರಾಂತಿಯ ಸಂದರ್ಭದ ಭೂಗತ ಆಂದೋಲನದಲ್ಲಿ ಮುಂಚೂಣಿಯಲ್ಲಿತ್ತು ಮತ್ತು ಅದರಲ್ಲಿ ಭಾಗವಹಿಸುವವರನ್ನು 'ಆಗಸ್ಟರ್ಸ್' ಎಂದೇ ಕರೆಯುತ್ತಿದ್ದರು. ತನ್ನ ಸಾಹಸಪೂರ್ಣ ಹಿನ್ನೆಲೆಯ ಕಾರಣದಿಂದಾಗಿ ಕಾಂಗ್ರೆಸ್ ಸಮಾಜವಾದಿ ಪಕ್ಷ ತನ್ನ ಕಡೆಗೆ ಯುವಕರನ್ನು ಅತ್ಯಧಿಕವಾಗಿ ಆಕರ್ಷಿಸಿತು. ಅಷ್ಟೇ ಅಲ್ಲ, ಸಮಾಜವು ಸಹ ಆ ಪಕ್ಷಕ್ಕೆ ತನ್ನ ಸಮರ್ಥನೆಯನ್ನು ಕೊಟ್ಟಿತು. ಆದರೆ ಪಕ್ಷದ ಸಂಘಟನೆಯು ಬ್ರಿಟಿಷ್ ಸರ್ಕಾರದ ದಮನಕಾರಿ ನೀತಿಯ ಕಾರಣದಿಂದಾಗಿ ಬಹಳಷ್ಟು ನಷ್ಟಕ್ಕೆ ಒಳಗಾಯಿತು. ಸೋಶಿಯಾಲಿಸ್ಟರು ಮತ್ತು ಕಮ್ಯುನಿಸ್ಟರು ಯಾರು ಒಂದು ಕಾಲಕ್ಕೆ ಜೊತೆಯಾಗಿದ್ದರೂ ಅವರು ಈಗ ಒಬ್ಬರು ಇನ್ನೊಬ್ಬರ ಶತ್ರುವಾದರು! ಏಕೆಂದರೆ ೧೯೪೨ ರ ಭಾರತ ಬಿಟ್ಟು ಹೋಗಿ ಚಳುವಳಿಯ ಸಂದರ್ಭದಲ್ಲಿ ಕಮ್ಯುನಿಸ್ಟರು ಬ್ರಿಟಿಷ್ ಸಾಮ್ರಾಜ್ಯವಾದದೊಂದಿಗೆ ಪೂರ್ಣವಾಗಿ ಜೊತೆಗೂಡಿದ್ದರು. ೧೯೪೨ ರ ಆಂದೋಲನದ ಕಮ್ಯುನಿಸ್ಟರ ಪಾತ್ರದವರೆಗೆ ಮಾತ್ರ ಈ ಭಿನ್ನಾಭಿಪ್ರಾಯ ಸೀಮಿತವಾಗಿರಲಿಲ್ಲ. ಆದರೆ ಸ್ಟಾಲಿನ್ ನೇತೃತ್ವದ ರಷ್ಯಾದಲ್ಲಿ ನಡೆದುಬಂದ ನಿರಂಕುಶ ಪ್ರಭುತ್ವದ ಬಗ್ಗೆ ಜನರಿಗೆ ಹೆಚ್ಚು ಹೆಚ್ಚು ತಿಳಿಯುತ್ತಾ ಹೋದಂತೆ ಕಮ್ಯುನಿಸ್ಟರ ನೀತಿಗಳ ಬಗ್ಗೆ ವಿವಿಧ ಪ್ರಕಾರದ ಪ್ರಶ್ನೆಗಳು ಹುಟ್ಟುತ್ತಾ ಬಂದವು. ೧೯೪೬ ರಲ್ಲಿ ಒಂದು ದಿನ ಜಯಪ್ರಕಾಶರು ಪಾಟ್ನಾದಲ್ಲಿ ವಿದ್ಯಾರ್ಥಿಗಳ ಒಂದು ಅಧ್ಯಯನ ಶಿಬಿರವನ್ನು ಉದ್ದೇಶಿಸಿ ಮಾತನಾಡುತ್ತಿದ್ದರು ಈ ಲೇಖನದ ಲೇಖಕ ಕೂಡ ಆ ವಿದ್ಯಾರ್ಥಿಗಳಲ್ಲಿ ಒಬ್ಬನಾಗಿದ್ದ. ಆ ತರಗತಿಯಲ್ಲಿ ಜಯಪ್ರಕಾಶರು ಸೋವಿಯತ್ ರಷ್ಯಾದಲ್ಲಿ ಸಮಾಜವಾದದ ಹೆಸರಿನಲ್ಲಿ ಒಂದು ಬರ್ಬರ ಸರ್ವಾಧಿಕಾರಿ ಶಾಸನವು ಜಾರಿಗೆ ಬಾದ ನಂತರ ಸಮಾಜವಾದಿ ಆಂದೋಲನದೊಳಗೆ ಬಹಳಷ್ಟು ವಿವಾದಗಳು ಹುಟ್ಟಿಕೊಂಡದ್ದರ ಬಗ್ಗೆ ಯುವ ಸಮಾಜವಾದಿಗಳ ಗಮನವನ್ನು ಸೆಳೆಯುವ ಪ್ರಯತ್ನವನ್ನು ಜೆ. ಪಿ. ಮಾಡುತ್ತಿದ್ದರು. ಪ್ರಪಂಚದಾದ್ಯಂತ ಬುದ್ಧಿ ಜೀವಿಗಳು ರಷ್ಯಾದಲ್ಲಿ ಆಗಿರುವ ವಿಕೃತಿ

ಗಳನ್ನು ತಿಳಿಯಲು ಮತ್ತು ಅವುಗಳ ವಿಶ್ಲೇಷಣೆಯನ್ನು ಮಾಡಲು ಪ್ರಯತ್ನಿಸುತ್ತಿದ್ದರು.

ಜಯಪ್ರಕಾಶರು ಈ ವಿಭಿನ್ನ ವಿಚಾರಧಾರೆಗಳ ಬಗ್ಗೆ ಸಂಕ್ಷಿಪ್ತವಾಗಿ ವಿವರಣೆಯನ್ನು ಕೊಟ್ಟರು. ಅವರು ಏನೆಲ್ಲ ಹೇಳಿದರೊ ಅದರಲ್ಲಿ ಬಹಳಷ್ಟು ಮಾಹಿತಿ ಅಲ್ಲಿ ಹಾಜರಿದ್ದ ಯುವಕರ ಗ್ರಹಿಕೆಗೆ ಮೀರಿದ ವಿಷಯವಾಗಿತ್ತು. ನನಗೆ ಈಗಲೂ ನೆನಪಿದೆ. ಬಹಳಷ್ಟು ವಿಷಯಗಳನ್ನು ಚರ್ಚಿಸುತ್ತಾ ಜಯಪ್ರಕಾಶರು ಆರ್ಥರ್ ಕೊಯಸಲರ್ ಅವರ ಪುಸ್ತಕ 'ದಿ ಯೋಗಿ ಅಂಡ್ ದಿ ಕಮಿಸ್ಸಾರ್'' ಎಂಬುಧನ್ನು ಪ್ರಸ್ತಾಪಿಸಿದರು. ಕೊಯಸಲರ್ ನ್ಯಾಯಪೂರ್ಣ ಸಮಾಜವನ್ನು ಸ್ಥಾಪಿಸುವ ಪ್ರಯತ್ನ ಮಾಡುವ ಎಲ್ಲ ಆಂದೋಲನಗಳು ಯಾವ ಯಾವ ಪ್ರಕಾರದ ವೈರುಧ್ಯಗಳನ್ನು ಎದುರಿಸಬೇಕಾಗುತ್ತದೆಂಬುದನ್ನು ಆ ಪುಸ್ತಕದಲ್ಲಿ ಚಿತ್ರಿಸಿದ್ದಾರೆ. ಕೊಯಸಲರ್ ಅವರ ಪ್ರಕಾರ ಯೋಗಿಯ ನೈತಿಕತೆ ಮತ್ತು ಸಾಧನಗಳ ಪಾವಿತ್ರ್ಯತೆಯ ಮಾರ್ಗ ಪ್ರಭಾವಶೂನ್ಯವಾಗುತ್ತದೆ ಮತ್ತು ನಿರಾಶೆಯ ಕಡೆಗೆ ಕೊಂಡೊಯ್ಯುತ್ತವೆ.

ಇನ್ನೊಂದು ಕಡೆಗೆ ಕಮಿಸಾರನ ರಾಜಕೀಯ ಅಧಿಕಾರದ ಸಿದ್ಧಿಯ ನಂತರ ಮೇಲಿನಿಂದ ಒಂದು ಕಠೋರವಾದ ವ್ಯವಸ್ಥೆಯನ್ನು ಜಾರಿಗೆ ತರುವ ಮಾರ್ಗವು ಕಡ್ಡಾಯವಾಗಿ ಜನತೆಯ ವಿರುದ್ಧ ಒಂದು ಸ್ವಾರ್ಥಪೂರ್ಣ ಹಾಗೂ ದಮನಕಾರಿ ಶಾಸನಕ್ಕೆ ಜನ್ಮ ಕೊಡುತ್ತದೆ. ಜಯಪ್ರಕಾಶರು ಜೀವನದುದ್ದಕ್ಕೂ ತಮ್ಮ ಸ್ವಂತದ ಸಂಘರ್ಷಗಳನ್ನು ಮತ್ತು ಸಾಮಾಜಿಕ ಆಂದೋಲನ ಈ ಎರಡನ್ನು ಅತಿವಾದಗಳಿಂದ ಮುಕ್ತವಾಗಿಡಲು ಸತತವಾಗಿ ಪ್ರಯತ್ನ ಮಾಡಿದರು.

ಜಯಪ್ರಕಾಶರು ತಮ್ಮ ಜೀವನದ ಕೊನೆಯ ಆಹ್ವಾನವನ್ನು ತಮ್ಮ ೭೦ನೇ ವರ್ಷದಲ್ಲಿ ಸ್ವೀಕರಿಸಿದರು; ಆದರೂ ಕೂಡ ಬ್ರಿಟಿಷರು ಒಡ್ಡಿದ್ದ ಆಹ್ವಾನಗಳನ್ನು ಅವರು ಯಾವ ಒಂದು ಉತ್ಸಾಹದಿಂದ ಎದುರಿಸಿದ್ದರೋ ಅಷ್ಟೇ ಉತ್ಸಾಹದಿಂದ ಕೊನೆಯ ಈ ಆಹ್ವಾನವನ್ನೂ ಸಹ ಎದುರಿಸಿದರು. ೭೦ರ ವಯಸ್ಸಿನ ನಂತರ ಬಹಳ ಕೆಲವೇ ಜನರು ಯಾವುದೇ ಒಂದು ಹೊಸ ಆಹ್ವಾನವನ್ನು ಎದುರಿಸಲು ಸಿದ್ಧರಿರುತ್ತಾರೆ. ಈ ವಯಸ್ಸಿನಲ್ಲಿ ಹೆಚ್ಚು ಜನರು ಯಾವುದೋ ಒಂದು ಸಿದ್ಧಾಂತದ ಆಶ್ರಯ ಅಥವಾ ಸಿದ್ಧಾಂತದ ಶರಣಾಗಲು ಇಷ್ಟ ಪಡುತ್ತಾರೆ. ಆದರೆ ಜಯಪ್ರಕಾಶರು ಮನುಷ್ಯನ ಸ್ವಾತಂತ್ರ್ಯಕ್ಕೆ ಮತ್ತು ಗೌರವಕ್ಕೆ ಧಕ್ಕೆ ಒದಗಿದರೆ ತಕ್ಷಣ ಏನಾದರೊಂದು ಕ್ರಮ ಕೈಗೊಳ್ಳುವುದು ಅತ್ಯಂತ ಜರೂರು ಕೆಲಸ ಎಂದು ಭಾವಿಸುತ್ತಿದ್ದರು. ಏಕೆಂದರೆ ಮಾನವನ ಸ್ವಾತಂತ್ರ್ಯ ಮತ್ತು ಗೌರವಗಳನ್ನು ಉಳಿಸಲು ಕೆಲಸಕ್ಕೆ

ಬಾರದ ಯಾವುದೇ ಸಿದ್ಧಾಂತಕ್ಕಿಂತ ಅವು ಜಯಪ್ರಕಾಶರಿಗೆ ಹೆಚ್ಚು ಬೆಲೆಯುಳ್ಳದ್ದಾಗಿದ್ದವು. ೭೦ ರ ವಯಸ್ಸನ್ನು ದಾಟಿದ್ದರೂ ಸಹ ಅವರಲ್ಲಿ ಯುವಕರಿಗೆ ಸಹಜವಾದ ಉತ್ಸಾಹ ಮತ್ತು ಜಿಜ್ಞಾಸೆ ಅವರಲ್ಲಿ ಉಳಿದುಕೊಂಡೇ ಇದ್ದವು ಅಂದರೆ ಯಾವುದೇ ಹೊಸ ದಾರಿಯಲ್ಲಿ ನಡೆಯಲು ಮತ್ತು ಅದರಲ್ಲಿ ತಮ್ಮನ್ನು ಪೂರ್ತ ಅರ್ಪಿಸಲು ತತ್ಪರರಾಗಿರುತ್ತಿದ್ದರು. ಅವರು ತಮ್ಮ ಈ ಯೌವನದ ಮಾನಸಿಕ ಬಲದ ಕಾರಣದಿಂದಾಗಿಯೇ ತಮ್ಮ ಜೀವನದಲ್ಲಿ ಎರಡು ಬಾರಿ ಭಾರತದ ಯುವಕರ ಮಾನಸವನ್ನು ಕ್ರಾಂತಿಯ ತಮ್ಮ ಕನಸಿನಿಂದ ಪುಳಕಿತಗೊಳಿಸಲು ಸಮರ್ಥರಾದರು. ಮೊದಲ ಸಲ ೧೯೪೨ರಲ್ಲಿ ೪೦ನೇ ವಯಸ್ಸಿನಲ್ಲಿ ಮತ್ತು ಎರಡನೇ ಸಲ ೧೯೭೪ರಲ್ಲಿ ೭೦ನೇ ವಯಸ್ಸಿನಲ್ಲಿ ಜಯಪ್ರಕಾಶರು ವ್ಯಕ್ತಿತ್ವದ ಎರಡನೇ ಮಗ್ಗಲು ಪ್ರಾಮಾಣಿಕತೆ ಮತ್ತು ವಿನಮ್ರತೆಯ ರೂಪದಲ್ಲಿ ಪ್ರಕಟಗೊಳ್ಳುತ್ತದೆ. ಅವರು ನೆಹರೂರ ಆಧಿಪತ್ಯದ ಕಾಂಗ್ರೆಸ್ ಪಕ್ಷಕ್ಕೆ ಆಹ್ವಾನ ಕೊಡುವುದಕ್ಕಾಗಿ ಪ್ರತಿದ್ವಂದ್ವಿ ಪಕ್ಷದ ರೂಪದಲ್ಲಿ ಸಮಾಜವಾದಿ ಪಕ್ಷದ ನಿರ್ಮಾಣದ ಪ್ರಯತ್ನದಲ್ಲಿ ತೊಡಗಿದ್ದಾಗ ಜಯಪ್ರಕಾಶರ ವ್ಯಕ್ತಿತ್ವದ ಎರಡನೇ ಮಗ್ಗಲು ಪ್ರಾಮಾಣಿಕತೆ ಮತ್ತು ವಿನಮ್ರತೆಯ ಮತ್ತು ನೆಹರೂರ ಬಗ್ಗೆ ತಮ್ಮ ಆದರ ಪೂರ್ಣವಾದ ದೃಷ್ಟಿ ಮತ್ತು ವ್ಯವಹಾರವನ್ನು ಕಾಪಾಡಿಕೊಂಡೇ ಬಂದರು. ಪ್ರಾರಂಭದ ವರ್ಷಗಳಲ್ಲಿ ಕಾಂಗ್ರೆಸ್ ಸಮಾಜವಾದಿ ಪಕ್ಷ ಜಯಪ್ರಕಾಶರ ಪ್ರಭಾವದಿಂದಾಗಿ ಮಹಾತ್ಮಾ ಗಾಂಧೀಯವರ ನೀತಿಗಳ ಮೇಲೆ ಅವ್ಯಾಹತವಾಗಿ ಪ್ರಹಾರ ಮಾಡುತ್ತಲೇ ಇತ್ತು. ಎಷ್ಟೋ ಸಲ ಅದರ ಮುಖ್ಯ ಗುರಿ ಮಹಾತ್ಮಾ ಗಾಂಧೀಯವರ ನೀತಿಗಳೆಂದೇ ಅನಿಸುತ್ತಿತ್ತು. ಇಷ್ಟೆಲ್ಲ ಆದರೂ ಗಾಂಧೀಜಿಯವರ ಬಗ್ಗೆ ಇದ್ದ ತಮ್ಮ ಶ್ರದ್ಧಾ ಭಾವವನ್ನು ಜಯಪ್ರಕಾಶರು ಎಂದೂ ತ್ಯಜಿಸಲಿಲ್ಲ ಮತ್ತು ಅವರನ್ನು ತಮ್ಮ ತಂದೆ ಸಮಾನ ರಾಜ ನಾಯಕರೆಂದೇ ಭಾವಿಸುತ್ತಾ ಬಂದರು. ವಿನೋಬಾರೊಂದಿಗೆ ತಮ್ಮ ಭಿನ್ನಾಭಿಪ್ರಾಯ ಇದ್ದರೂ ಕೂಡ ಅವರು ವಿನೋಬಾ ಭಾವೆಯವರ ಭೂದಾನ ಆಂದೋಲನ ಮತ್ತು ಸರ್ವೋದಯವನ್ನು ಒಪ್ಪಿಕೊಂಡನಂತರ ಶ್ರದ್ಧಾಯುಕ್ತ ಶಿಷ್ಯನ ಪಾತ್ರವನ್ನು ವಹಿಸಿಕೊಂಡರು. ಜಯಪ್ರಕಾಶರ ಮುಗ್ಧತೆ ಮತ್ತು ವಿಭಿನ್ನ ಮೂಲಗಳಿಂದ ಕಲಿಯುವ ಅವರ ಇಚ್ಛೆಯನ್ನು ಕುರಿತು ಡಾ। ಲೋಹಿಯಾ ಹೀಗೆ ಹೇಳಿದರು, ಕೆಲವರು ಯಾವಾಗಲೂ "ಗುರುವಿನ" ಹುಡುಕಾಟದಲ್ಲಿರುತ್ತಾರೆ. ವ್ಯಕ್ತಿಗತವಾದ ದೊಡ್ಡಸ್ತಿಕೆಯಿಂದಾಗಿ ಅನೇಕ ಸಲ ರಾಜಕೀಯ ಪಕ್ಷಗಳ ಕಾರ್ಯಕರ್ತರ ಮಧ್ಯ ಭ್ರಮೆ ಉಂಟಾಗುತ್ತದೆ ಎಂಬ ಮಾತಿನ ಬಗ್ಗೆ ಯಾವ ಸಂಶಯವೂ ಇಲ್ಲ. ಏಕೆಂದರೆ ಯಾವುದೇ ರಾಜಕೀಯ ಪಕ್ಷವಾಗಲಿಯತನ್ನ ಕಾರ್ಯಕರ್ತರನ್ನು ಒಂದು ಸೂತ್ರ

ದಲ್ಲಿ ಬಂಧಿಸಿಡಲು ಜಗತ್ತನ್ನು ಕತ್ತಲು ಮತ್ತು ಬೆಳಕು ಎಂದು ವಿಭಾಗಿಸು ವುದು ಅಗತ್ಯವೆನಿಸುತ್ತದೆ. ಆದರೆ ಇದು ಜಯಪ್ರಕಾಶರ ಕಾರ್ಯಪದ್ಧತಿ ಯಾಗಿರಲಿಲ್ಲ. ಇದನ್ನು ನಾವು ಗಮನದಲ್ಲಿರಿಸಿಕೊಂಡರೆ ರಾಜಕೀಯ ಕ್ಷೇತ್ರದಲ್ಲಿ ಜಯಪ್ರಕಾಶರು ನಂತರದ ವರ್ಷಗಳಲ್ಲಿ ರಾಜಕೀಯ ಪಕ್ಷಗಳ ಬಗ್ಗೆ ಏಕೆ ತಿರಸ್ಕಾರದ ಮನೋಭಾವ ಹೊಂದಿದ್ದರೆಂಬುದು ಅರ್ಥವಾಗುತ್ತದೆ. ಈ ತಿರಸ್ಕಾರದ ಮನೋಭಾವ ಅವರ ಜೀನವದಲ್ಲಿ ವಿಡಂಬನೆಯನ್ನೂ ತಂದಿತು. ಪಕ್ಷರಾಜಕಾರಣದ ವಾಸ್ತವಿಕತೆ ಮತ್ತು ಅವುಗಳ ಅನಿವಾರ್ಯತೆಯನ್ನು ಒಪ್ಪಿ ಕೊಂಡಾದ ಮೇಲೆ ಅವುಗಳನ್ನು ಅಲ್ಲಗಳೆಯಲಾಗದು. ಆದ್ದರಿಂದ ಹೊರಗೆ ಹೋದೆಯಾ ಪಿಶಾಚಿ ಅಂದರೆ ಗವಾಕ್ಷಿಯಿಂದ ಬಂದೆ ಎಂಬಂತಾಯಿತು. ಪಕ್ಷ ರಾಜಕಾರಣದ ಸವಾಲುಗಳನ್ನು ಎದುರಿಸುವ ಅವಶ್ಯಕತೆ ಉಂಟಾದಾಗ ಅವು ಗಳನ್ನು ಅವರು ಸ್ವೀಕರಿಸಿದರು. ಸವಾಲುಗಳನ್ನು ಎದುರಿಸುವುದರಿಂದ ಓಡಿ ಹೋಗುವ ವ್ಯಕ್ತಿ ಜಯಪ್ರಕಾಶ್ ಆಗಿರಲಿಲ್ಲ. ಮೇಲೆ ನಾವು ಜಯಪ್ರಕಾಶರ ಚಾರಿತ್ರ್ಯದ ಕೆಲವು ವಿಶೇಷತೆಗಳ ಚರ್ಚೆ ಮಾಡಿದ್ದೇವೆ. ಈಗ ನಾವು ಸಂಕ್ಷಿಪ್ತ ವಾಗಿ ಭಾರತೀಯ ರಾಜನೀತಿಯಲ್ಲಿ ಅವರ ಪಾತ್ರದ ಬಗ್ಗೆ ವಿಚಾರ ಮಾಡೋಣ. ಅಮೇರಿಕೆಯಲ್ಲಿ ಅಧ್ಯಯನ ಮಾಡುವಾಗ ಓರ್ವ ಯುವ ವಿದ್ಯಾರ್ಥಿಯಾಗಿ ಜಯಪ್ರಕಾಶರು ಮಾರ್ಕ್ಸ್‌ವಾದದಿಂದ ಅತ್ಯಧಿಕವಾಗಿ ಪ್ರಭಾವಿತರಾದರು. ಆದರೆ ಇದಕ್ಕೂ ಮೊದಲು ಅವರು ಮಹಾತ್ಮ ಗಾಂಧೀಯವರ ಪ್ರಭಾವದಲ್ಲಿ ಒಂದು ಪ್ರಬಲ ರಾಷ್ಟ್ರವಾದಿ ಆಗಿದ್ದರು ಮತ್ತು ಅವರು ಇಂಗ್ಲೀಷರ ಶಾಲಾ ವ್ಯವಸ್ಥೆ ಯನ್ನು ಬಹಿಷ್ಕರಿಸಿದ್ದರು. ಕಾಂಗ್ರೆಸ್ ಸಮಾಜವಾದಿ ಪಕ್ಷವನ್ನು ಸಂಘಟಿಸುವ ಪ್ರಯತ್ನ ಮಾಡುವುದರಲ್ಲಿ ಮೇಲೆ ಬರೆಯಲಾದ ಎರಡು ಮಾತುಗಳ ಭೂಮಿಕೆ ಸ್ಪಷ್ಟವಾಗಿ ಗೋಚರಿಸುತ್ತದೆ. ಸೋಶಿಯಾಲಿಸ್ಟ್ ಪಾರ್ಟಿ ಎಂಬ ಹೆಸರೆ ಹೊಸ ಪಕ್ಷದ ಕಾರ್ಯಕ್ರಮ ಮತ್ತು ಉದ್ದೇಶಗಳನ್ನು ಪ್ರಕಟಗೊಳಿಸು ತ್ತದೆ. ಮೊದಲನೆಯ ಕೆಲಸ ದೇಶವನ್ನು ವಿದೇಶದ ಆಡಳಿತದಿಂದ ಮುಕ್ತ ಮಾಡುವುದು. ಮತ್ತು ಎರಡನೆಯ ಕೆಲಸ ಸಮಾಜವನ್ನು ಒಂದು ಸಮಾಜ ವಾದಿ ಸಮಾಜದಲ್ಲಿ ಪರಿವರ್ತನೆಗೊಳಿಸುವುದು. ಈ ಕಾರ್ಯಕ್ರಮ ಒಂದು ಪ್ರಕಾರದಲ್ಲಿ ರಷಿಯಾದ ಕ್ರಾಂತಿಗೆ ಮೊದಲು ತಮ್ಮನ್ನು ಸೋಶಿಯಲ್ ಡೆಮಾ ಕ್ರೆಟ್ ಎಂದು ಕರೆದುಕೊಳ್ಳುತ್ತಿದ್ದ ಯೂರೋಪಿನ ಮಾರ್ಕ್ಸ್‌ವಾದಿಗಳ ಎರಡನೆ ಕಾರ್ಯಕ್ರಮಕ್ಕೆ ಸಮಾನಾಂತರವಾಗಿತ್ತು. ಈ ಯೂರೋಪಿಯ ಮಾರ್ಕ್ಸ್‌ವಾದಿ ಗಳ ಉದ್ದೇಶ್ಯ ತಮ್ಮ ಸಮಾಜವಾದಿ ಕ್ರಾಂತಿಯ ಪ್ರಸ್ತಾವನೆಯಲ್ಲಿ ಲೋಕ ತಾಂತ್ರಿಕ ಕ್ರಾಂತಿಗೆ ಮೊದಲನೆಯ ಸ್ಥಾನವನ್ನು ಕೊಡುವುದೇ ಆಗಿತ್ತು. ಕಾಂಗ್ರೆಸ್ ಸಮಾಜವಾದಿ ಪಕ್ಷಕ್ಕೆ ರಾಷ್ಟ್ರೀಯ ಕ್ರಾಂತಿಯ ಅರ್ಥ ಲೋಕ

ತಾಂತ್ರಿಕ ಕ್ರಾಂತಿ ಎಂದೇ ಆಗಿತ್ತು. ಮುಂದಿನ ವರ್ಷಗಳಲ್ಲಿ ಕಾಂಗ್ರೆಸ್ ಸಮಾಜವಾದಿ ಪಕ್ಷವು ದೇಶದಲ್ಲಿ ಲೋಕ ತಂತ್ರದ ರಕ್ಷಣೆಮಾಡುವಲ್ಲಿ ಒಂದು ಮಹತ್ವದ ಪಾತ್ರವನ್ನು ನಿರ್ವಹಿಸಿತು. ಕಮ್ಯೂನಿಸ್ಟ್ ಪಾರ್ಟಿಯು ಕಾರಣ ದಿಂದ ದೇಶವು ಪೂರ್ಣರೂಪದಲ್ಲಿ ಸೋವಿಯತ್ ರಷಿಯಾದ ತತ್ವವನ್ನು ಸ್ವೀಕರಿಸಿ ಬೇರೆ ಒಂದು ಸಮಾಜವಾದಿ ಆಂದೋಲನವು ಹುಟ್ಟಲು ಮತ್ತು ಲೋಕ ತಂತ್ರದ ರಕ್ಷಣೆ ಮಾಡುವ ಕೆಲಸವನ್ನು ಬಹಳಷ್ಟು ಸುಗಮ ಮಾಡಿತು. ೧೯೨೫ ರಿಂದ ಕಮ್ಯೂನಿಸ್ಟ್ ಪಾರ್ಟಿ ಸ್ಥಿರವಾಯಿತು. ಸೋವಿಯತ್ ಯುೂನಿಯನ್ ಅಧಿಕಾಧಿಕ ಸರ್ವ ಅಧಿಕಾರವಾದಿ ಆಗುತ್ತಾ ಹೋದಂತೆ ಕಮ್ಯೂನಿಸ್ಟರು ಲೋಕ ತಂತ್ರವನ್ನು ಒಂದು ಮೇಲ್ವರ್ಗದ ಭ್ರಮೆ ಯೆಂದು ಅದನ್ನು ವ್ಯಾಖ್ಯಾನಿಸಲು ಪ್ರಾರಂಭಿಸಿದರು. ಇಷ್ಟೇ ಅಲ್ಲ, ಅಂತರ್ ರಾಷ್ಟ್ರೀಯ ನೀತಿಗಳಲ್ಲಿ ಬದಲಾವಣೆಯ ಕಾರಣದಿಂದ ಭಾರತೀಯ ಕಮ್ಯೂ ನಿಸ್ಟ್ ಪಕ್ಷವು ಮಹಾತ್ಮ ಗಾಂಧಿಯವರನ್ನು ಬಂಡವಾಳಶಾಹಿಗಳ ದಳ್ಳಾಳಿ ಗಳೆಂದು ಮತ್ತು ಕಾಂಗ್ರೇಸ್ ಪಕ್ಷ ಮೇಲ್ವರ್ಗದ ಜನರ ಹಿತವನ್ನು ಸಾಧಿಸು ವಂಥ ಪಕ್ಷ ಎಂದು ಆರೋಪಿಸಲು ಪ್ರಾರಂಭಿಸಿತು. ಈ ಸಂಕಟ ತುಂಬಿದ ವರ್ಷಗಳಲ್ಲಿ ಕಾಂಗ್ರೇಸ್‌ನೊಂದಿಗೆ ಸಂಬಂಧ ಇಟ್ಟುಕೊಳ್ಳುವಲ್ಲಿ ಮತ್ತು ಸೋಷಿಯಾಲಿಸ್ಟರು ದೇಶದ ಸ್ವಾತಂತ್ರ್ಯ ಮತ್ತು ಲೋಕ ತಂತ್ರದ ಬಗ್ಗೆ ಪ್ರತಿಬದ್ಧತೆಯನ್ನು ಬಲವಾಗಿ ಸಮರ್ಥನೆ ಮಾಡುವಲ್ಲಿ ಸಮರ್ಥರಾದರು.

ಅವರು ಕಾಂಗ್ರೆಸ್ ಪಕ್ಷವನ್ನು ಕೂಲಿಕಾರರು ಮತ್ತು ರೈತರು ವಹಿಸಿಕೊಳ್ಳುವಂತೆ ಪ್ರೇರೇಪಿಸಿದರು ಮತ್ತು ಈ ಪ್ರಕಾರವಾಗಿ ಅದನ್ನು ಎಡ ಪಂಥದ ಒಳಗೆ ತರಲು ಕೂಡ ಪ್ರಯತ್ನಿಸಿದರು. ಈ ಪ್ರಯತ್ನದಲ್ಲಿ ಅವರಿಗೆ ಜವಾಹರಲಾಲ ನೆಹರು ಮತ್ತು ಸುಭಾಷ್‌ಚಂದ್ರಬೋಸ್‌ರಂಥ ನಾಯಕರ ನೆರವು ದೊರೆಯಿತು. ಕಾಂಗ್ರೆಸ್ಸಿನ ಸಂಬಂಧಗಳು ಬಹಳಷ್ಟು ಬಿಗಿಯಾದವು. ಕೊನೆಯಲ್ಲಿ ಕಾಂಗ್ರೇಸ್ಸಿನ ಎಡ ಪಂಥಿ ಒಲುವಿನ ಒಂದು ಸಮೂಹವು ಕಾಂಗ್ರೆಸ್ಸಿನಿಂದ ಪ್ರತ್ಯೇಕವಾಯಿತು ಮತ್ತು ಅದು ಸುಭಾಷ್ ಚಂದ್ರಬೋಸ್ ನೇತೃತ್ವದಲ್ಲಿ ಒಂದು ಹೊಸ ಸಂಘಟನೆಯನ್ನು ಸ್ಥಾಪಿಸಿಕೊಂಡಿತು. ಆ ಸಂಘಟನೆಯ ಹೆಸರು "ಫ್‌ವರ್ಡ್ ಬ್ಲಾಕ್." ಅದು ಸಮಾಜವಾದಿ ಕಾಂಗ್ರೆಸ್ಸಿನ ಒಳಗೆ ಉಳಿಯಿತು. ಈ ಸಮಯದಲ್ಲಿ ಜಯಪ್ರಕಾಶರ ಪಾತ್ರ ನಿರ್ಣಾಯಕವಾಗಿತ್ತು ಏಕೆಂದರೆ ಅವರೇ ಕಾಂಗ್ರೆಸ್ ಸಮಾಜವಾದಿ ಪಕ್ಷದ ಎಲ್ಲರಿಗಿಂತ ಹೆಚ್ಚು ಪ್ರಭಾವಶಾಲಿ ಮುಖಂಡರಾಗಿದ್ದರು ಮತ್ತು ಅವರು ಕಾಂಗ್ರೇಸಿನೊಂದಿಗೆ ವಿಲೀನ ವನ್ನು ಕಾಯಂ ಗೊಳಿಸುವ ಅಭಿಪ್ರಾಯದವರಾಗಿದ್ದರು. ತಮ್ಮ ಈ ದೃಷ್ಟಿ ಕೋನದ ಕಾರಣದಿಂದಾಗ ಜಯಪ್ರಕಾಶರು ಬೇರೆ ಎಡ ಪಂಥೀಯರ ಕೋಪಕ್ಕೆ

ತುತ್ತಾಗಬೇಕಾಯಿತು. ಆಂದೋಲನದ ಮೂರು ವರ್ಷಗಳ ನಂತರ ೧೯೪೨ರ ಭಾರತ ಬಿಟ್ಟುಹೋಗಿ ಚಳುವಳಿಯ ಆಂದೋಲನದ ಸಂದರ್ಭದಲ್ಲಿ ಕಾಂಗ್ರೇಸ್ಸಿನಲ್ಲಿಯೇ ಉಳಿದುಕೊಳ್ಳಬೇಕೆಂಬ ಅವರ ನಿರ್ಣಯದ ಔಚಿತ್ಯ ಪೂರ್ಣವಾಗಿ ಪ್ರಕಟಗೊಂಡಿತು. ಜರ್ಮನಿಯ ಮೇಲೆ ಆಕ್ರಮಣದ ನಂತರ ಕಮ್ಯೂನಿಸ್ಟರು ಎರಡನೆ ವಿಶ್ವ ಯುದ್ಧವನ್ನು "ಜನತಾ ಯುದ್ಧ"ವೆಂದು ಹೇಳಲು ಪ್ರಾರಂಭಿಸಿದರು. ಮತ್ತು ಬ್ರಿಟಿಷ್ ಸರ್ಕಾರಕ್ಕೆ ಸಹಾಯಮಾಡಲೂ ಪ್ರಾರಂಭಿಸಿದರು. ಸುಭಾಷ್ ಚಂದ್ರ ಬೋಸರು ಆಗ ಜಪಾನಿನಲ್ಲಿದ್ದರು ಮತ್ತು ಅವರ ಫಾರ್ವರ್ಡ್ ಬ್ಲಾಕ್ ತುಂಡುತುಂಡಾಗಿತ್ತು. ಕಾಂಗ್ರೆಸಿನ ಎಲ್ಲ ಮುಂಖಡರು ಬಂಧಿಸಲ್ಪಟ್ಟಿದ್ದರು ಮತ್ತು ಬ್ರಿಟಿಷ್‌ಸರ್ಕಾರವು ಭಾರತ ಬಿಟ್ಟು ಹೋಗಿ ಆಂದೋಲನವನ್ನು ಹತ್ತಿಕ್ಕಲಿ ಬರ್ಬರಹಾಗೂ ದಮನಕಾರಿ ನೀತಿಯನ್ನು ಅನುಸರಿಸಿತು. ಇಂಥ ಸ್ಥಿತಿಯಲ್ಲಿ ಭೂಗತ ಆಂದೋಲನವನ್ನು ನಡೆಸಿಕೊಂಡು ಹೋಗಲು ಒಂದು ಸಂಘಟಿತವಾದ ಗುಂಪಿನ ರೂಪದಲ್ಲಿ ಕೇವಲ ಸಮಾಜವಾದಿಗಳು ಮಾತ್ರ ಉಳಿದರು. ಈ ಸಂಕಟ ಕಾಲದ ಸಂದರ್ಭದಲ್ಲಿ ಜಯಪ್ರಕಾಶರು ತಮ್ಮ ಅರ್ಧ ಡಜನ್ ಜೊತೆಗಾರರೊಂದಿಗೆ ಹಜಾರಿಬಾಗ್ ಜೈಲಿನಿಂದ ಓಡಿಹೋದರು ಮತ್ತು ಅವರು ಸ್ವಾತಂತ್ರ್ಯಯೋಧರನ್ನು ಆಹ್ವಾನಿಸುವ ಎರಡು ಪತ್ರಗಳನ್ನು ಬರೆದರು. ಇಂದಿಗೂ ಕೂಡ ಅವನ್ನು ನೆನೆದು ಕೊಳ್ಳಲಾಗುತ್ತದೆ. ಜಯಪ್ರಕಾಶರನ್ನು ೧೯೪೨ ರ ಭಾರತ ಬಿಟ್ಟು ಹೋಗಿ ಚಳುವಳಿಯು ಜಯಪ್ರಕಾಶರನ್ನು ನಾಯಕನನ್ನಾಗಿ ಮಾಡಿತು, ಈ ಆಂದೋಲನವು ಸಮಾಜವಾದಿಗಳಿಗೆ ಅಸಾಧಾರಣವಾದ ಮಹತ್ವದಾಗಿತ್ತು. ಈ ಆಂದೋಲನದ ಅನುಭವದಿಂದಾಗಿ ಅವರು ಕಮ್ಯೂನಿಸ್ಟರಿಂದ ತಮ್ಮ ದಾರಿಯನ್ನುಬೇರೆ ಇಡಬೇಕೆಂದು ನಿರ್ಣಯಿಸಿದರು ಮತ್ತು ಈ ದಾರಿಯಲ್ಲಿ ವಿಷಯಗಳ ಕಮ್ಯೂನಿಸ್ಟರ ಅನೇಕ ಸಿದ್ಧಾಂತಗಳ ವಿರೋಧ ಮಾಡಬೇಕಾಗುತ್ತದೆ. ಇಲ್ಲಿ ಒಂದು ಮಾತು ಜ್ಞಾಪಕದಲ್ಲಿರಬೇಕು. ಏನೆಂದರೆ ಎರಡನೆ ವಿಶ್ವ ಯುದ್ಧದ ನಂತರದ ವರ್ಷಗಳಲ್ಲಿ ಪ್ರಪಂಚದಾದ್ಯಂತ ಕಮ್ಯೂನಿಸ್ಟ್ ಆಂದೋಲನ ಅಭೂತಪೂರ್ವ ವೇಗದಿಂದ ಮುಂದುವರಿಯುತ್ತಿತ್ತು. ರಷಿಯಾದ ಸೈನ್ಯವು ಯುರೋಪಿನ ಒಂದು ದೊಡ್ಡ ಪ್ರದೇಶದ ಮೇಲೆ ಅಧಿಕಾರ ಸ್ಥಾಪಿಸಿಗೊಂಡಿತು, ಚೈನಾದಲ್ಲಿ ೧೯೪೮ ರಲ್ಲಿ ಒಂದು ದೀರ್ಘಕಾಲದ ಯುದ್ಧದ ನಂತರ ಕಮ್ಯೂನಿಸ್ಟರ ಅಧಿಕಾರವು ಇಡೀ ದಕ್ಷಿಣ ಪೂರ್ವ ಏಷಿಯಾದಲ್ಲಿ ಕಂಡು ಬರುತಿತ್ತು. ಇರಾನಿನಲ್ಲಿಯೂ ಕೂಡ ಅವರು ಶಕ್ತಿಶಾಲಿಯಾಗಿದ್ದರು. ದಕ್ಷಿಣಾ ಆಫ್ರಿಕಾದ ವರೆಗೆ ಚಿಕ್ಕ ಚಿಕ್ಕ ಪ್ರಭಾವಿ ಕ್ಷೇತ್ರಗಳು ಉಂಟಾಗುತ್ತಿದ್ದವು. ಯುರೋಪಿನಲ್ಲಿ ಫ್ರಾನ್ಸ್ ಮತ್ತು ಇಟಲಿಯಲ್ಲಿ ಕಮ್ಯೂನಿಸ್ಟ್ ಪಕ್ಷವು ಬಹಳ ಬಲಿಷ್ಠವಾಗಿತ್ತು ಇಡೀ ಕಮ್ಯೂನಿಸ್ಟ್ ಪಕ್ಷವು ಕಮ್ಯೂನ್‌ಗಳ ಮಾಧ್ಯಮದಿಂದ

ಸೋವಿಯತ್ ಕಮ್ಯೂನಿಸ್ಟ್ ಪಾರ್ಟಿಯ ನಿಯಂತ್ರಣದಲ್ಲಿದ್ದವು ಮತ್ತು ಸರ್ವಾಧಿಕಾರದ ರಾಜ್ಯವನ್ನು ಸಮರ್ಥಿಸುತ್ತಿದ್ದವು. ಸರ್ವಾಧಿಕಾರಿ ಶಾಸನವನ್ನು ಅವು ರೈತರ ಸರ್ವಾಧಿಕಾರಿ ಶಾಸನವೆಂದೇ ತಿಳಿದುಕೊಂಡಿದ್ದವು. ಆದರೆ ನಿಜವಾಗಿ ಆ ಪದ್ಧತಿಯಲ್ಲಿ ರೈತರಿಗಾಗಲಿ ಕೂಲಿಕಾರರಿಗಾಗಲಿ ಯಾವುದೇ ಪ್ರಕಾರದ ಸ್ವಾತಂತ್ರ್ಯವಿರಲಿಲ್ಲ ಮತ್ತು ಆಡಳಿತವನ್ನು ನಡೆಸುವುದರಲ್ಲಿ ಕೂಡ ಯಾವುದೇ ಸ್ವತಂತ್ರವಾದ ಪಾತ್ರವಿರಲಿಲ್ಲ. ಕಮ್ಯೂನಿಸಂನ ಮುಂದುವರಿಯುತ್ತಿರುವ ವೇಗದ ಈ ಅಲೆಯು ಮುಂದೆ ಪ್ರಜಾಪ್ರಭುತ್ವವಿಲ್ಲದೆ. ಸಮಾಜವಾದದ ಸ್ಥಾಪನೆ ಸಾಧ್ಯವೇ ಇಲ್ಲ ಎಂದು ಹೇಳುವ ಮಾತು ಒಂದು ಹುಚ್ಚು ಸಾಹಸದ ಮಾತೇ ಸರಿ. ಈ ಸಾಹಸವು ಕಾರ್ಯಗತವಾಗ ಬೇಕಾದರೆ ಪ್ರಜಾಪ್ರಭುತ್ವದ ಬಗ್ಗೆ ಧೃಢವಾದ ಆಸ್ಥೆ ಇದ್ದರೆ ಮಾತ್ರ ಜಾರಿಗೆ ಬರಲು ಸಾಧ್ಯವಾಗುತ್ತಿತ್ತು. ಈ ಸಮಯದಲ್ಲಿ ಕಮ್ಯೂನ್ ರೂಪದ ಸಂಕೇತವನ್ನು ಭಾರತದ ಕಮ್ಯೂನಿಸ್ಟರು ಬಿ.ಟಿ. ರಣದಿವೆ ಅವರ ನೇತೃತ್ವದಲ್ಲಿ ಸಶಸ್ತ್ರ ಹೋರಾಟದ ಮೂಲಕ ಅಧಿಕಾರವನ್ನು ಹಿಡಿಯುವ ಚಳುವಳಿಯನ್ನು ಹೂಡಿದರು ಮತ್ತು ಚೀನಾದ ಸೂಚನೆಯ ಮೇರೆಗೆ ಆಂಧ್ರಪ್ರದೇಶದ ತೆಲಂಗಣಾ ಪ್ರದೇಶವನ್ನು ರೈತರ ಶಕ್ತಿಯ ಒಂದು ಕೋಟೆಯನ್ನಾಗಿ ನಿರ್ಮಿಸಿದರು.

ಈ ರೀತಿ ರೈತರ ಶಕ್ತಿಕೋಟೆಯನ್ನು ರಚಿಸಿ ಕೊನೆಯಲ್ಲಿ ಆಡಳಿತದ ಮೇಲೆ ಹಿಡಿತವನ್ನು ಸಾಧಿಸಬೇಕೆಂಬುದು ಕಮ್ಯೂನಿಸ್ಟರ ಗುರಿಯಾಗಿತ್ತು. ಸಮಾಜವಾದಿಗಳು ಸಶಸ್ತ್ರ ಸಂಘರ್ಷದ ಮಾರ್ಗದಿಂದ ತಮ್ಮ ದೃಷ್ಟಿಯನ್ನು ತೆಗೆದು ತೆಗೆದು ಪ್ರಜಾಸತ್ತೆಯ ಮಾರ್ಗದಲ್ಲಿ ನಡೆಯುವ ನಿರ್ಣಯವನ್ನು ಮಾಡಿದರು. ತಮ್ಮ ಈ ನಿರ್ಣಯವಾದ ಕಾರಣದಿಂದಾಗಿ ಸಮಾಜವಾದಿಗಳು ಕಮ್ಯೂನಿಸ್ಟರ ತೀವ್ರ ಟೀಕೆಗೆ ಒಳಪಡಬೇಕಾಯಿತೆಂದು ಹೇಳುವ ಅಗತ್ಯವಿಲ್ಲ. ಜಯ ಪ್ರಕಾಶರ ನೇತೃತ್ವದಲ್ಲಿ ೧೯೪೮ ರಲ್ಲಿ ಕಾಂಗ್ರೇಸ್ ಪಕ್ಷದ ಹೊರಗೆ ಸಮಾಜವಾದಿ ಪಕ್ಷದ ಸಂಘಟನೆ ಪುನಃ ಆದಾಗ ಪ್ರಜಾಸತಾತ್ಮಕ ಸಮಾಜವಾದ ಮತ್ತು ಸರ್ವಾಧಿಕಾರಿ ಕಮ್ಯೂನಿಸಂಗಳ ಮಧ್ಯ ಇರುವ ಭೇದ ಸ್ಪಷ್ಟ ರೂಪದಲ್ಲಿ ಗುರುತಿಸಲ್ಪಟ್ಟಿತು ಮತ್ತು ವ್ಯಾಖ್ಯಾನಿಸಲ್ಪಟ್ಟಿತು. ಸಮಾಜವಾದಿ ಪಾರ್ಟಿಯ ನೀತಿಯು ಮಾದರಿ. ಬ್ರಿಟನ್ನಿನಲ್ಲಿಯೂ ಸೋಶಿಯಾಲಿಸ್ ಪಾರ್ಟಿಯು ಸ್ವಂತ ಬಲದಿಂದ ಚುನಾವಣೆಗೆದ್ದು ಅಧಿಕಾರಕ್ಕೆ ಬಂದಿತು. ಅಧಿಕಾರ ಸಿಕ್ಕ ನಂತರ ಅದು ಉದ್ಯೋಗಗಳ ರಾಷ್ಟ್ರೀಕರಣದ ದಿಕ್ಕಿನಲ್ಲಿ ಕೆಲವು ಪ್ರಮುಖ ಹೆಜ್ಜೆಗಳನ್ನು ಇಟ್ಟಿತು ಮತ್ತು ನಾವು ಜಯ ಪ್ರಕಾಶರು ಆಗಾಗ್ಗ ಒಂದು ಪ್ರಕಾರ ಯುವಕರಲ್ಲಿರುವ ಉತ್ಸಾಹದಿಂದ ಕ್ರಿಯಾಶೀಲರಾಗುತ್ತಿದ್ದರು ಎಂದು ಮೇಲೆ ಹೇಳಿದ್ದೇನೆ.

ಅವರು ಬ್ರಿಟನ್ ಮತ್ತು ಭಾರತದ ಪರಿಸ್ಥಿತಿಗಳಲ್ಲಿಯ ಭಿನ್ನತೆಯನ್ನು ಅಧ್ಯಯನ ಮಾಡಿದರು. ಅವರ ಪ್ರಯತ್ನದಿಂದಾಗಿ ೧೯೪೮ ರಲ್ಲಿ ಸಮಾಜವಾದಿ ಪಕ್ಷವು ಸಕ್ರಿಯ ಕಾರ್ಯಕರ್ತರ ಪಾರ್ಟಿಯ ಬದಲಾಗಿ ಜನ ಸಾಮಾನ್ಯರ ಪಕ್ಷವಾಗಿ ರೂಪಾಂತರಗೊಂಡಿತು. ಬ್ರಿಟಿಷ್ ಲೇಬರ್ ಪಾರ್ಟಿಯ ನಿಯಮಾವಳಿಯಲ್ಲಿ ಎರಡು ಪ್ರಕಾರದ ಸದಸ್ಯತ್ವಗಳಿಗೆ ಅವಕಾಶ ಇಡಲಾಗಿತ್ತು. ಒಂದು ನಿಟ್ಟಿನಲ್ಲಿ ಜನರಿಗೆ ದೊಡ್ಡ ಪ್ರಮಾಣದಲ್ಲಿ ವ್ಯಕ್ತಿಗತ ಸದಸ್ಯತ್ವವನ್ನು ಕೊಡಲಾಯಿತು. ಎರಡನೆಯ ನಿಟ್ಟಿನಲ್ಲಿ ಕೂಲಿಕಾರರ ಸಂಘಟನೆಗಳಿಗೆ. ರೈತರ ಸಂಘಟನೆಗಳಿಗೆ ಮತ್ತು ಸಹಕಾರಿ ಸಮಿತಿಗಳ ಸಂಬಂಧ ಇಟ್ಟುಕೊಂಡಂಥವರಿಗೆ ಸದಸ್ಯತ್ವವನ್ನು ಕೊಡಲಾಯಿತು. ಭಾರತ ಮತ್ತು ಬ್ರಿಟನ್ನಿನಲ್ಲಿ ಇರುವ ಪರಿಸ್ಥಿತಿಗಳ ಕಾರಣದಿಂದ ಈ ರೀತಿಯ ಸಂಘಟನಾತ್ಮಕ ವ್ಯವಸ್ಥೆ ಭಾರತದಲ್ಲಿ ಪ್ರಯೋಜನವಾಗಲಿಲ್ಲ. ಆದರೆ ಈ ಪ್ರಯೋಗದ ಆಳವಾದ ಪ್ರಭಾವ ಸಮಾಜವಾದಿ ಪಕ್ಷದ ಮೇಲೆ ಆಯಿತು. ಈ ಪ್ರಭಾವದ ಒಳ್ಳೆಯ ಪರಿಣಾಮ ಏನೆಂದರೆ ತನ್ನ ಅಡಿಪಾಯವನ್ನು ವಿಸ್ತೃತ ಮಾಡಲು ಸಾಧ್ಯವಾಯಿತು ಮತ್ತು ಹೊಸ ಕ್ಷೇತ್ರಗಳಲ್ಲಿ ಅದರ ಪ್ರವೇಶವಾಯಿತು. ಆದರೆ ಇನ್ನೊಂದು ನಕಾರಾತ್ಮಕ ಪರಿಣಾಮವೇನೆಂದರೆ ಇದರಿಂದಾಗಿ ಪಕ್ಷದ ಶಿಸ್ತಿನಲ್ಲಿ ಸಡಿಲತೆ ಉಂಟಾಯಿತು, ಮತ್ತು ಅವರಲ್ಲಿ ವ್ಯಕ್ತಿಗತವಾದ ಮಹತ್ವಾಕಾಂಕ್ಷೆಗಾಗಿ ಪಕ್ಷವನ್ನು ಉಪಯೋಗಿಸಿಕೊಳ್ಳುವ ಮತ್ತು ಗುಂಪುಗಾರಿಕೆಯಂಥ ದೋಷಗಳು ಉಂಟಾದವು. ಇದರಿಂದಾಗಿ ಪಕ್ಷದ ಕಾರ್ಯಕರ್ತರಲ್ಲಿ ಪ್ರಾರಂಭದಲ್ಲಿದ್ದ ಆದರ್ಶವಾದ ಕಡಿಮೆಯಾಗುತ್ತಾ ಹೋಯಿತು. ಈ ಹೊಸ ಸಂಘಟನೆಯ ವ್ಯವಸ್ಥೆಯು ಪಕ್ಷಕ್ಕೆ ಲಾಭದಾಯಕವಾಗಿತ್ತೇ ಅಥವಾ ನಷ್ಟದಾಯಕವಾಗಿತ್ತೇ ಎಂಬುದು ಚರ್ಚೆಯ ವಿಷಯವಾಗಿ ಉಳಿಯುವುದು. ಆದರೆ ಇದರಿಂದಾಗಿ ಪಕ್ಷವನ್ನು ಒಂದು ಚುನಾವಣೆಯ ದೊಡ್ಡ ಯಂತ್ರವನ್ನಾಗಿ ಮಾಡಿತು ಎಂಬುದು ನಿಸ್ಸಂಶಯ ಮತ್ತು ಅದರ ಸಂಘಟನೆಯು ದೂರದ ಪ್ರದೇಶಗಳವರೆಗೆ ತಲುಪಿತು. ಪಕ್ಷದ ಈ ದಿಢೀರ್ ವಿಸ್ತಾರ ದೊಡ್ಡ ದೊಡ್ಡ ಆಸೆಗಳನ್ನು ಹುಟ್ಟುಹಾಕಿತು ಮತ್ತು ಜಯಪ್ರಕಾಶ ಹಾಗೂ ಬೇರೆ ನಾಯಕರು ದೇಶವು ಬ್ರಿಟನ್ನಿನ ಮಾದರಿಯಲ್ಲಿ ಚುನಾವಣಾ ರಾಜನೀತಿಯ ದ್ವಿಪಕ್ಷಿಯ ವ್ಯವಸ್ಥೆಯ ಕಡೆಗೆ ಹೋಗುತ್ತಿರುವ ಬಗ್ಗೆ ಆಲೋಚಿಸಲು ಪ್ರಾರಂಭಿಸಿದರು. ಈ ವ್ಯವಸ್ಥೆಯಲ್ಲಿ ಸಮಾಜವಾದಿ ಪಕ್ಷವು ತನ್ನ ಸ್ವಂತ ಬಲದಿಂದ ಕಾಂಗ್ರೆಸ್ಸಿನ ಮುಖ್ಯ ವಿರೋಧ ಪಕ್ಷದ ರೂಪದಲ್ಲಿ ಹೊರಹೊಮ್ಮುವುದು ಮತ್ತು ಅದರಿಂದಾಗಿ ಒಂದು ಸುಬದ್ಧವಾದ ಪ್ರಜಾಪ್ರಭುತ್ವದ ರಾಜಕಾರಣ ಶಾಶ್ವತವಾಗುವುದು ಎಂದು ಭಾವಿಸಿದರು. ಸಮಾಜವಾದಿ ಪಕ್ಷ ಮತ್ತು ಅದರೊಂದಿಗೆ ಸಂಬಂಧ

ಇಟ್ಟುಕೊಂಡಿದ್ದ ಸಂಘಟನೆಗಳಾದ ಹಿಂದ್ ಮಜ್ದೂರ್ ಸಭಾ ಮತ್ತು ಹಿಂದ್ ಕಿಸಾನ್ ಪಂಚಾಯತ್ ಸಂಘಟಿಸಿದ ರ್‍ಯಾಲಿಗಳಲ್ಲಿ ದೊಡ್ಡ ಜನ ಸಮೂಹ ಉಂಟಾದಾಗ ಜಯಪ್ರಕಾಶ ಮತ್ತು ಬೇರೆ ನಾಯಕರಿಗೆ ಸಮಾಜವಾದಿ ಪಕ್ಷ ಕಾಂಗ್ರೆಸ್ಸಿನ ಮುಖ್ಯ ವಿರೋಧಿ ಪಕ್ಷದ ರೂಪದಲ್ಲಿ ಹೊರ ಹೊಮ್ಮುವುದೆಂಬ ಭ್ರಮೆ ಉಂಟಾಯಿತು. ಆದರೆ ಜನ ಸಮೂಹದ ಅರ್ಥ ಮತಗಳು ದೊರೆ ಯುತ್ತವೆಂಬುದಲ್ಲ. ರ್‍ಯಾಲಿಗಳಲ್ಲಿ ಕಂಡು ಬರುತ್ತಿದ್ದ ಅಪಾರವಾದ ಸಮರ್ಥನೆ ಮೇಲು ಮೇಲಿನ ನೊರೆಯಂತೆ ಇತ್ತು ಮತ್ತು ಪಕ್ಷದ ಸಂಘಟನೆ ಯನ್ನು ಜನಮಾನಸದಲ್ಲಿ ಸ್ಥಿರಗೊಳಿಸಲು ಅನುಕೂಲವಾಗಿರಲಿಲ್ಲ. ಇನ್ನೊಂದು ಕಡೆಗೆ ಮಹಾತ್ಮ ಗಾಂಧೀ, ನೆಹರು ಮತ್ತು ಬೇರೆ ನಾಯಕರ ನೇತೃತ್ವದಲ್ಲಿ ಕಾಂಗ್ರೆಸ್ ಪಕ್ಷವು ಈ ದೇಶದ ಪ್ರತಿಯೊಂದು ಹಳ್ಳಿಯವರೆಗೆ ತಲುಪಿತ್ತು ಮತ್ತು ಜನಮಾನಸದ ಮೇಲೆ ಅದರ ಆಳವಾದ ಪ್ರಭಾವ ಉಂಟಾಗಿತ್ತು. ೧೯೫೨ ರ ಸಾರ್ವತ್ರಿಕ ಚುನಾವಣೆಯಲ್ಲಿ ಸಮಾಜವಾದಿ ಪಕ್ಷಕ್ಕೆ ದೊಡ್ಡ ಪರಾಜಯ ವಾಯಿತು. ಇದಕ್ಕೆ ವ್ಯತಿರಿಕ್ತವಾಗಿ ಕಮ್ಯೂನಿಸ್ಟ್ ಪಕ್ಷವು ಹೆಚ್ಚು ಜಯವನ್ನು ಪಡೆಯಿತು.

ದ್ವಿಪಕ್ಷೀಯ ಪ್ರಜಾರಾಜ್ಯ ವ್ಯವಸ್ಥೆಯ ರೀತಿಯ ಬಗ್ಗೆ ಇದ್ದ ಮೋಹದ ಕಾರಣದಿಂದ ಸಮಾಜವಾದಿ ಶಿಬಿರದಲ್ಲಿ ಆಳವಾದ ನಿರಾಶೆ ಉಂಟಾಯಿತು. ಈ ಸಮಯದಲ್ಲಿ ಜಯಪ್ರಕಾಶರು ಪಕ್ಷದ ಸಿದ್ಧಾಂತದ ಮುಖ್ಯ ವ್ಯಾಖ್ಯಾನಕಾರರಾಗಿ ದ್ದರು. ಪಕ್ಷದ ಸೋಲಿನಿಂದಾಗಿ ಅವರು ಬಹಳವಾಗಿ ಅಘಾತಗೊಂಡರು, ಚುನಾ ವಣೆಯ ಪರಿಣಾಮಗಳನ್ನು ಕುರಿತ ಧೈರ್ಯ ಪೂರ್ವಕವಾಗಿ ಆಮೂಲಾಗ್ರ ವಿಶ್ಲೇಷಣೆಯನ್ನು ಮಾಡುವ ಅಗತ್ಯವಿತ್ತು. ಇಷ್ಟೊಂದು ದೊಡ್ಡ ಸೋಲು ಏಕೆ ಮತ್ತು ಹೇಗೆ ಆಯಿತು? ಆದರೆ ಜಯಪ್ರಕಾಶರ ಪ್ರವೃತ್ತಿ ಯಾವಾಗಲೂ ಭಾವಾವೇಶವಾಗಿ ಪ್ರತಿಕ್ರಿಯಿಸುವುದೇ ಆಗಿತ್ತು. ಚುನಾವಣೆಯಲ್ಲಿ ಆದ ಸೋಲು ಪಕ್ಷದ ಒಳಗೆ ವ್ಯಕ್ತಿಗತ ಜಗಳಗಳಿಗೂ ಮತ್ತು ಕಲಹಗಳಿಗೂ ಕಾರಣವಾಯಿತು. ನಾಯಕರ ಮಧ್ಯೆ ಭಿನ್ನಾಭಿಪ್ರಾಯಗಳು ಹುಟ್ಟಿಕೊಂಡವು. ಇದು ಜಯಪ್ರಕಾಶರ ಪಕ್ಷ ರಾಜಕಾರಣದ ಮೋಹದ ಭಂಗಕ್ಕೆ ಕಾರಣವಾಯಿತು. ಶಾಸನ ಸಭೆಗಳಲ್ಲಿ ಅಧಿಕಾರವನ್ನು ಪಡೆಯುವುದಕ್ಕಾಗಿ ಒಂದು ಸುಗಮವಾದ ರೀತಿಯ ರೂಪದಲ್ಲಿ ಪಕ್ಷವು ಆಚಾರ್ಯ ಕೃಪಾಲಾನಿಯವರ ಕಿಸಾನ್ ಮಜ್ದೂರ್ ಪ್ರಜಾ ಪಾರ್ಟಿ ಮತ್ತು ಬೇರೆ ಚಿಕ್ಕ ಪಕ್ಷಗಳೊಂದಿಗೆ ಸೇರಿ ಪ್ರಜಾ ಸೋಷ ಯಾಲಿಸ್ಟ್ ಪಾರ್ಟಿಯ ಸಂಘಟನೆ ಮಾಡಿದರು. ಆಚಾರ್ಯ ಕೃಪಾಲಾನಿ ಇದರ ಅಧ್ಯಕ್ಷರಾಗಿದ್ದರು ಮತ್ತು ಡಾ. ಲೋಹಿಯಾ ಜನರಲ್ ಸೆಕ್ರೆಟರಿ ಆಗಿದ್ದರು. ಸಮಾಜವಾದದ ಕೆಲವು ವಿಶೇಷತೆಗಳನ್ನು ಮತ್ತು ಮೌಲ್ಯಗಳನ್ನು ಉಳಿಸಿ

ಕೊಂಡು ಬಂದರಾದರೂ ಪ್ರಜಾ ಸೋಷಿಯಲಿಸ್ಟ್ ಪಾರ್ಟಿಯ ಸ್ವರೂಪದಲ್ಲಿ ರಚನೆಗೊಂಡ ಪಕ್ಷವು ಪೂರ್ಣವಾಗಿ ಭಿನ್ನ ಪ್ರಕಾರದ ಪಕ್ಷವಾಗಿತ್ತು. ಆ ಪಕ್ಷದ ಅಧ್ಯಕ್ಷರಾಗಿದ್ದ ಆಚಾರ್ಯ ಕೃಪಲಾನಿಯವರಿಗೆ ಸಮಾಜವಾದದ ಆದರ್ಶಗಳನ್ನು ಕುರಿತು ತಮಾಷೆಮಾಡುವುದಕ್ಕೆ ಯಾವ ಸಂಕೋಚವೂ ಆಗುತ್ತಿರಲಿಲ್ಲ. ನಿಶ್ಚಿತವಾಗಿಯೂ ಈ ಪಕ್ಷವು ಜಯಪ್ರಕಾಶರ ಆದರ್ಶಗಳ ಪರೀಕ್ಷೆಗೆ ಒಳಗಾಗಲು ಸಾಧ್ಯವಿರಲಿಲ್ಲ. ಜಯಪ್ರಕಾಶರು ಮಾರ್ಕ್ಸ್‌ವಾದಿಯಾಗಿದ್ದರು. ಈ ಪಕ್ಷವು ಶಾಸನ ಸಭೆಗಳ ಮೂಲಕ ಸುನಿಶ್ಚಿತವಾದ ಸಾಮಾಜಿಕ ಗುರಿಗಳನ್ನು ಸಾಧಿಸುವುದಕ್ಕೆ ನಡೆಸಬೇಕಾಗಿರುವ ಸಮಗ್ರ ಮತ್ತು ನಿರಂತರವಾದ ಆಂದೋಲನದ ಒಂದು ಚಿಕ್ಕ ಅಂಶಮಾತ್ರವಾಗಿತ್ತು. ಈ ಪಕ್ಷದ ನೇತೃತ್ವವು ಡಾ॥ ಲೋಹಿಯಾ ಮತ್ತು ಅಶೋಕ್ ಮೆಹ್ತಾರಂಥ ವಾಸ್ತವವಾದಿ ವ್ಯಕ್ತಿಗಳ ಸುಪರ್ತಿನಲ್ಲಿತ್ತು.

ದೇಶದ ಅನೇಕ ರಾಜ್ಯಗಳಲ್ಲಿ ಕಾಂಗ್ರೆಸ್ಸಿನ ಆಧಿಪತ್ಯ ಕೊನೆಗೊಂಡಿತು. ಸಮಾಜದಲ್ಲಿ ಮೂಲಭೂತ ಪರಿವರ್ತನೆಯನ್ನು ತರುವುದಕ್ಕಾಗಿ ಒಂದು ಹೊಸ ಶಕ್ತಿಮೂಲದ ಹುಡುಕಾಟದಲ್ಲಿ ಜಯಪ್ರಕಾಶರು ಭೂದಾನದ ಕಡೆಗೆ ತಮ್ಮ ದೃಷ್ಟಿಯನ್ನು ಹರಿಸಿದರು. ಈ ಸಮಯದಲ್ಲಿ ಆದರ್ಶವಾದದ ಬಗ್ಗೆ ಜಯಪ್ರಕಾಶರ ದೃಷ್ಟಿಕೋನವು ಪೂರ್ಣ ಬದಲಾವಣೆ ಕಂಡಿತು. ಭೌತಿಕವಾದದ ವಿಚಾರಧಾರೆಯು ಒಳ್ಳೆಯ ಮತ್ತು ಒಳ್ಳೆಯದಲ್ಲದಕ್ಕೆ ಪ್ರೋತ್ಸಾಹ ಕೊಡುವುದಿಲ್ಲ. ಭೌತಿಕವಾದವು ಮನುಷ್ಯನು ಒಳ್ಳೆಯವ ಅಥವಾ ಕೆಟ್ಟವನಾಗಲು ಪ್ರೇರೇಪಿಸಲು ಸಧ್ಯವಿಲ್ಲ. ಇದಕ್ಕಾಗಿ ದೇವರಂಥ ಯಾವುದಾದರೂ ಆಧ್ಯಾತ್ಮಿಕ ಶಕ್ತಿಯಲ್ಲಿ ಆಸಕ್ತಿ ಇರಬೇಕಾಗುತ್ತದೆ. ರಾಜನೀತಿಯ ಬಗ್ಗೆ ಅವರಿಗಿದ್ದ ಮೋಹವು ಭಂಗವಾಗಿದ್ದಂಥ ಕಾಲದಲ್ಲಿ ಈ ಸಮಸ್ಯೆಯ ಬಗ್ಗೆ ಬಿಡುವಾಗಿದ್ದುಕೊಂಡು ಜಯಪ್ರಕಾಶರು ವಿಚಾರ ಮಾಡಿರಲಿಲ್ಲ ಎಂಬುದು ಸಾರ್ವತ್ರಿಕವಾಗಿ ಗೊತ್ತಿದೆ. ಅವರ ಎಲ್ಲ ಸಮಾಜವಾದಿ ಆಂದೋಲನಗಳ ಆದರ್ಶಗಳ ಮೂಲದಲ್ಲಿ ಮನುಷ್ಯನ ಮತ್ತು ಸಮಾಜದ ಒಳ್ಳೆಯ ವಿಷಯವನ್ನು ಹುಡುಕುವ ಮೌಲ್ಯಗಳ ಬಗ್ಗೆ ಅವರಿಗೆ ಆಳವಾದ ಬದ್ಧತೆ ಇತ್ತು. ಸ್ವಯಂ ಸಮಾಜವಾದಿ ಆಂದೋಲನದ ಮೌಲ್ಯಗಳ ಬೇರು ಇಸಾಯಿ ಧರ್ಮದಲ್ಲಿದ್ದವು. ಟೀಟ್ಸೇ ಈ ತಥ್ಯವನ್ನು ಪೂರ್ಣವಾಗಿ ಸ್ವೀಕಾರ ಮಾಡುತ್ತಾ ಇದನ್ನು ದಾಸ್ಯ ನೈತಿಕತೆ ಎಂದು ಹೇಳಿದರು. ಮಾನವೀಯ ವ್ಯವಹಾರ ಮತ್ತು ಇತರ ಜಾಗತೀಕ ವ್ಯವಹಾರಗಳಲ್ಲಿ ಮೌಲ್ಯವನ್ನು ಹುಡುಕುವುದಕ್ಕಾಗಿ ಜಯಪ್ರಕಶಾರು ತಮ್ಮ ತತ್ವವನ್ನು ಬಿಟ್ಟುಕೊಡಬೇಕಾದ ಯಾವ ಅಗತ್ಯವು ಇರಲಿಲ್ಲ. ಸರ್ವೋದಯ ವಿಚಾರವು ಅವರನ್ನು ಬಹಳವಾಗಿ ಆಕರ್ಷಿಸಿತು ಮತ್ತು ಸರ್ವೋದಯವು ಆಧ್ಯಾತ್ಮಿಕತೆಯ ಕಡೆಗೆ ವಿಶೇಷವಾಗಿ ಅಭಿರುಚಿ ಇಟ್ಟುಕೊಂಡಿದೆ ಎಂದು

ಅನಿಸಿತು ಭೂದಾನ್ ಆಂದೋಲನದ ಬಗ್ಗೆ ಅವರ ಒಲುವಿಗೆ ಕಾರಣ ದೇಶದ ವಿಭಿನ್ನ ರಾಜ್ಯಗಳಲ್ಲಿ ಭೂ ಸುಧಾರಣೆಯ ಕಾನೂನುಗಳು ಪ್ರಯೋಜನಕ್ಕೆ ಬಂದಿಲ್ಲವೆಂದು ಗೊತ್ತಾದುದರ ಪರಿಣಾಮವಾಗಿ ಆಗಿತ್ತು. ಭೂಮಿಯ ಗರಿಷ್ಠ ಹಿಡುವಳಿಯನ್ನು ನಿರ್ಧರಿಸುವ ಕಾನುನೂಗಳಿಂದ ಹೆಚ್ಚು ಭೂಮಿಯನ್ನು ಪಡೆಯಲು ಸಾಧ್ಯವಿರಲಿಲ್ಲ ಮತ್ತು ಅಂಥ ಭೂಮಿಯ ವಿತರಣೆಯ ಸ್ಥಿತಿ ಇನ್ನು ಕೆಟ್ಟದಾಗಿತ್ತು. ಈ ಸಂದರ್ಭದಲ್ಲಿ ಕಾನುನೂಗಳಿಂದ ಪಡೆಯಲಾದ ಭೂಮಿಯ ಪ್ರಮಾಣದ ಜೊತೆಗೆ ಹೋಲಿಕೆ ಮಾಡಿದಲ್ಲಿ ಭನದಾನದ ಮೂಲಕ ಬಹಳಷ್ಟು ಹೆಚ್ಚು ಭೂ ಮಾಲಿಕತ್ವದ ಸ್ವರೂಪದ ಮೇಲೆ ಭೂದಾನದ ಯಾವ ಪ್ರಾಪ್ತ ವಾಗಿತ್ತು. ಪ್ರಭಾವ ಬಿದ್ದಿರಲಿಲ್ಲ ಮತ್ತು ಬೀಳುವಂತೆಯೂ ಇರಲಿಲ್ಲ. ಏಕೆಂದರೆ ಭೂದಾನದ ಆಂದೋಲನದಲ್ಲಿ ಸ್ವರೂಪವನ್ನು ಬದಲಾಯಿಸುವುದಕ್ಕೆ ಅವಕಾಶವಿರ ಲಿಲ್ಲ. ಭೂದಾನ ಆಂದೋಲನವು ಭೂ ಮಾಲೀಕನಿಂದ ಅವನ ಒಟ್ಟು ಜಮಿನಿನ ಆರನೇ ಭಾಗವನ್ನು ಮಾತ್ರ ಕೇಳುತ್ತಿತ್ತು. ಮಾಲೀಕನ ಬಳಿ ಎಷ್ಟು ಜಮೀನಿದೆ ಈ ಬಗ್ಗೆ ಅದರ ಯಾವ ಸಂಬಂದವೂ ಇರಲಿಲ್ಲ ಈ ಭೂದಾನ ಆಂದೋಲನವು ಹಳ್ಳಿ ಗಳಲ್ಲಿ ಸಾಮೂದಾಯಿಕ ಸಮಾಜದ ದಿಕ್ಕಿನಲ್ಲಿ ಒಂದು ದೊಡ್ಡ ಉಪಕ್ರಮವೆಂದು ಜಯಪ್ರಕಾಶರಿಗೆ ಅನಿಸಿತು. ಚೀನಾರಲ್ಲಿ ಸ್ಥಾಪಿತಗೊಂಡಿರುವ ಕಮ್ಯೂನುಗಳಿಗಿಂತ ಇವು ಭಿನ್ನವಾದುದಾಗಿರಲಿಲ್ಲವೆಂದು ಜಯಪ್ರಕಾಶರಿಗೆ ಅನಿಸಿತು. ಜಯಪ್ರಕಾಶರು ತಮ್ಮ ಮುಗ್ಧತೆಯ ಕಾರಣದಿಂದ ಈ ಎಲ್ಲ ಸಂಗತಿಗಳನ್ನು ನಿಜವೆಂದು ತಿಳಿದರು. ಅವರು ಇಂದ್ದಂಥ ಸ್ಥಿತಿಯಲ್ಲಿ ಯಾವುದೇ ವ್ಯಕ್ತಿ ಉಲ್ಲಸಿದ್ದರು. ಮತ್ತು ಪ್ರಭಾವಿತರು ಆಗದ ಇರಲು ಸಾಧ್ಯವಿರಲಿಲ್ಲ ಆದರೆ ನಿಜ ಸಂಗತಿ ಏನೆಂದರೆ ಕ್ರಾಂತಿಯು ಕೇವಲ ಕಾಗದದ ಮೇಲಾಗಿತ್ತು. ಗ್ರಾಮ ಸ್ವರಾಜ್ಯ ಇರುವಂಥ ಹಳ್ಳಿಗಳು ಮತ್ತು ಬೇರೆ ಹಳ್ಳಿಗಳಲ್ಲಿ ಯಾವುದೇ ವ್ಯತ್ಯಾಸ ಕಂಡುಬರಲಿಲ್ಲ. ಯಾವ ಸ್ಥಳಗಳಲ್ಲಿ ಜಯಪ್ರಕಾಶರು ಸ್ವತಃ ಸಕ್ರಿಯರಾಗಿದ್ದರೋ ಆ ಸ್ಥಳಗಳಲ್ಲಿಯೂ ಅದೇ ಪರಿಸ್ಥಿತಿಯನ್ನು ನೋಡಬಹುದಾಗಿತ್ತು.

ಅವರ ಪ್ರಭಾವದ ಕಾರಣ ಕೆಲವು ಗ್ರಾಮಾಭಿವೃದ್ಧಿ ಕಾರ್ಯಗಳಿಗಾಗಿ ಹಣವು ದೊರೆಯಿತು. ಆದರೆ ಸಮಾಜ ಪರಿವರ್ತನೆಯ ಯಾವ ಆಶೆಯನ್ನು ಅವರು ಇಟ್ಟುಕೊಂಡಿದ್ದರೊ ಆದರೆ ಸುಳಿವು ಸಿಕ್ಕಲಿಲ್ಲ. ಭೂದಾನ ಆಂದೋಲನವು ನಿಧಾನವಾಗುತ್ತಾ ಹೋಯಿತು ಜಯಪ್ರಕಾಶರು ಆ ಆಂದೋಲನ ದಿಂದ ದೂರವಾದ ಮೇಲೆ ಮೊದಲಿದ್ದ ಉದಾಸೀನತೆ ಮತ್ತು ನಿಷ್ಕ್ರೀಯತೆ ಮರುಕಳಿಸಿದವು ಬಿಹಾರಿನಲ್ಲಿ ಭೂದಾನದ ಕೆಲಸದ ಪ್ರಾರಂಭದಲ್ಲಿ ಯಾವ ಒಂದು ಉತ್ಸಾಹ ಕಂಡುಬರುತ್ತಿತೋ ಅದಕ್ಕೆ ಮುಖ್ಯ ಕಾರಣ ರೈತ ಆಂದೋಲನದಲ್ಲಿ ಸಕ್ರಿಯವಾಗಿದ್ದ ಬಹಳಷ್ಟು ಸಮಾಜವಾದಿ ಕಾರ್ಯಕರ್ತರು

ಜಯಪ್ರಕಾಶರ ಕಾರಣದಿಂದಾಗಿ ಸೇರಿಕೊಂಡಿದ್ದರು. ಜಯಪ್ರಕಾಶರು ಆಂದೋಲನದಲ್ಲಿ ಇರುವುದರಿಂದ ಈ ಆಂದೋಲನವು ಕ್ರಾಂತಿಕಾರಿ ಆಂದೋಲನವು ಆಗಿರುತ್ತದೆಂಬುದು ಆ ಕಾರ್ಯಕರ್ತರ ಖಚಿತ ಅಭಿಪ್ರಾಯವಾಗಿತ್ತು. ಆದರೆ ಪ್ರಾರಂಭದ ಉತ್ಸಾಹದ ನಂತರ ಎಲ್ಲವೂ ಹಳೆಯ ರೀತಿಗೆ ಹಿಂದಿರುಗಿತು. ಅದೇ ಉದಾಸೀನತೆ ಮತ್ತು ಹಿಂಜರಿತದ ಪರಂಪರೆ ಪ್ರಾರಂಭವಾಯಿತು. ಜಯಪ್ರಕಾಶರು ಖಂಡಿತವಾಗಿಯೂ ಭೂದಾನ ಮತ್ತು ಗ್ರಾಮದಾನ ಆಂದೋಲನಗಳು ಒಂದು ಕಿರಿದಾದ ಓಣಿಯಲ್ಲಿ ಬಂದು ನಿಂತಿರುವ ಬಗ್ಗೆ ಉದಾಸೀನರಾಗಿರಲೂ ಸಾಧ್ಯವಿರಲಿಲ್ಲ. ಆದರೆ ಭೂದಾನ ಆಂದೋಲನದಲ್ಲಿ ಸಕ್ರಿಯವಾಗಿದ್ದ ದಿನಗಳಲ್ಲಿ ಜಯಪ್ರಕಾಶರು ಅದರಲ್ಲಿಯೇ ಪೂರ್ತ ಮಗ್ನರಾಗಿರಲಿಲ್ಲ. ಅವರು ನಾಗಾಲ್ಯಾಂಡ್‌ನಲ್ಲಿ ಹಿಂಸೆಯನ್ನು ತಡೆಯುವುದಕ್ಕಾಗಿ ಒಂದು ಶಾಂತಿ ಸೇನೆಯನ್ನು ಸಂಘಟಿಸಿದರು. ಪೂರ್ವ ಪಾಕಿಸ್ತಾನದಲ್ಲಿ ಪಾಕಿಸ್ತಾನಿ ಸರ್ಕಾರದ ಕ್ರೌರ್ಯದ ಕಾರಣದಿಂದ ಭಾರತದಲ್ಲಿ ಆಶ್ರಯ ಪಡೆಯುವುದಕ್ಕಾಗಿ ಲಕ್ಷಾಂತರ ಜನರು ಭಾರತಕ್ಕೆ ಬಂದರು. ಆ ನಿರಾಶ್ರಿತರ ದುರ್ದಶೆಯು ಜಯಪ್ರಕಾಶರನ್ನು ಅತ್ಯಂತ ವ್ಯಗ್ರರನ್ನಾಗಿ ಮಾಡಿತು. ಈ ಬಗ್ಗೆ ಪ್ರಪಂಚದ ಗಮನವನ್ನು ಸೆಳೆಯುವುದಕ್ಕಾಗಿ ಅವರು ವಿದೇಶ ಯಾತ್ರೆ ಹೋದರು. ೧೯೬೦ ರ ದಶಕಗಳಲ್ಲಿ ಯೂರೋಪ್ ಮತ್ತು ಅಮೇರಿಕಾದಲ್ಲಿ ವಿಯೆಟ್ನಾಂ ವಿರುದ್ಧ ನಡೆಯುತ್ತಿದ್ದ ವಿದ್ಯಾರ್ಥಿಗಳ ಆಂದೋಲನಗಳನ್ನು, ಧರಣಿಗಳನ್ನು ಮತ್ತು ಫ್ರಾನ್ಸ್ ದೇಶದ ವಿದ್ಯಾರ್ಥಿಗಳ ಹೋರಾಟವನ್ನು ಜಯಪ್ರಕಾಶರು ಬಹಳ ಗಮನವಿಟ್ಟು ನೋಡುತ್ತಿದ್ದರು. ಈ ಎಲ್ಲ ಚಳುವಳಿಗಳಿಗೆ ಯಾವುದೇ ರಾಜಕೀಯ ಪಕ್ಷದ ಸಮರ್ಥನೆ ದೊರೆತಿರಲಿಲ್ಲವಾದರೂ ವಿದ್ಯಾರ್ಥಿಗಳು ಸರ್ಕಾರದ ಆಡಳಿತ ವ್ಯವಸ್ಥೆಯ ಮೂಲಗಳನ್ನು ಅಲ್ಲಾಡಿಸಲು ಸಾಧ್ಯವಾದುದನ್ನು ಜಯಪ್ರಕಾಶರು ಮುಖ್ಯವಾಗಿ ಗಮನಿಸಿದರು. ಜಯಪ್ರಕಾಶರ ನಡವಳಿಕೆಯಲ್ಲಿ ಇದ್ದ ವಿಶೇಷತೆ ಏನೆಂದರೆ ಅವರು ಗತಕಾಲದ ಮೌಲ್ಯಗಳಿಗೆ ಅಂಟಿಕೊಳ್ಳುತ್ತಿರಲಿಲ್ಲ. ಸರ್ವೋದಯ ಆಂದೋಲನದಿಂದ ಕ್ರಾಂತಿಯ ಸಾಧ್ಯತೆಗಳು ತಪ್ಪಿಹೋಗುತ್ತಿವೆ ಎಂದು ಗೊತ್ತಾದ ಕೂಡಲೇ ಹಾಗೂ ಸಮಾಜ ಪರಿವರ್ತನೆಯ ನಿಟ್ಟಿನಲ್ಲಿ ತಾವು ಏನನ್ನು ಮಾಡಲೂ ಸಮರ್ಥರಾಗುತ್ತಿಲ್ಲ ಎಂದು ಗೊತ್ತಾದ ಕೂಡಲೇ ವಿದ್ಯಾರ್ಥಿ ಯುವಶಕ್ತಿಯು ಸಮಾಜ ಪರಿವರ್ತನೆಯ ಒಂದು ಮೂಲವಾಗಬಲ್ಲದೆಂದು ಅವರಿಗೆ ಅನಿಸಿದ ಕೂಡಲೇ ಅವರು ಆ ಕಡೆಗೆ ದೃಷ್ಟಿ ಹರಿಸಿದರು. ಇಂಥ ಒಂದು ಸಂದರ್ಭ ೧೯೭೪ ರಲ್ಲಿ ಬಂದಿತು. ನಿರುದ್ಯೋಗವು ಹೆಚ್ಚುತ್ತಲೇ ಇತ್ತು ಮತ್ತು ಈ ಕುರಿತು ಚಿಂತೆ ಆಡಳಿತಗಾರರಲ್ಲಿ ಇರುವ ಯಾವ ಲಕ್ಷಣವು ಕಂಡುಬರುತ್ತಿರಲಿಲ್ಲ. ಈ ಸಮಯವು ಖಾದ್ಯ

ಪದಾರ್ಥಗಳ ಹಾಗೂ ಜೀವನದ ಅಗತ್ಯ ಪದಾರ್ಥಗಳ ಕೃತಕ ಅಭಾವದ ಸಮಯವು ಆಗಿತ್ತು. ಇಷ್ಟಲ್ಲದೇ ಆಡಳಿತದಲ್ಲಿ ಹಬ್ಬಿದ್ದ ಭ್ರಷ್ಟಾಚಾರವು ತನ್ನ ಎಲ್ಲ ಮಿತಿಯನ್ನು ಮೀರಿಬಿಟ್ಟಿತ್ತು. ಈ ಕಾರಣದಿಂದಾಗಿ ಜನತೆಗೆ ನೆರವು ತಲುಪಿಸುವ ಪ್ರಯತ್ನವು ನಿಷ್ಫಲವಾಗುತಿತ್ತು. ೧೯೭೩ರ ಕೊನೆಯಲ್ಲಿ ವಿದ್ಯಾರ್ಥಿಗಳು ಆಡಳಿತದಲ್ಲಿಯ ಭ್ರಷ್ಟಾಚಾರ ಮತ್ತು ನಿಸ್ಸಹಾಯಕತೆಯ ವಿರುದ್ಧ ಬಹಳಷ್ಟು ಕ್ಷೋಭೆಗೊಂಡು ಚಿಮನ್‌ಭಾಯಿ ಪಟೇಲ್ ಅವರ ನೇತೃತ್ವದ ಮಂತ್ರಿಮಂಡಲವು ರಾಜೀನಾಮೆ ಕೊಡಬೇಕೆಂಬ ಬೇಡಿಕೆಯೊಂದಿಗೆ ಆಂದೋಲನವನ್ನು ವಿದ್ಯಾರ್ಥಿಗಳು ಹೂಡಿದರು. ೧೯೭೪ರ ಫೆಬ್ರುವರಿ-ಮಾರ್ಚ್ ತಿಂಗಳಲ್ಲಿ ಬಿಹಾರದ ವಿದ್ಯಾರ್ಥಿಗಳು ಜೀವನ ನಡೆಸಲು ಅಗತ್ಯವಾದ ವಸ್ತುಗಳ ಭೀಕರ ಅಭಾವದ ವಿರುದ್ಧ ಬೀದಿಗಿಳಿದರು. ಜಯಪ್ರಕಾಶರಿಗೆ ವಿದ್ಯಾರ್ಥಿಗಳ ಆಕ್ರೋಶವನ್ನು ಒಂದು ಚಳುವಳಿಯಲ್ಲಿ ಪರಿವರ್ತಿಸುವ ಸಾಧ್ಯತೆಯು ಕಂಡಿತು. ಗುಜರಾತ್‌ತ ಉದಾಹರಣೆ ಅವರ ಎದುರಿಗೆ ಇತ್ತು. ಇಂಥ ಬೇಡಿಕೆಗಳಿಗಾಗಿ ವಿದ್ಯಾರ್ಥಿಗಳ ಹೋರಾಟವನ್ನು ಪ್ರಾರಂಭಿಸಿದುದರ ಶ್ರೇಯಸ್ಸು ಗುಜರಾತಿನ ವಿದ್ಯಾರ್ಥಿಗಳಿಗೆ ಸಲ್ಲುತ್ತದೆಂದು ಕೂಡ ಹೇಳಿದರು. ಗುಜರಾತ್ ರಾಜ್ಯವು ಬಹಳಷ್ಟು ಭ್ರಷ್ಟವಾಗಿದೆ ಮತ್ತು ಅದನ್ನು ಸಹಿಸಲು ಸಾಧ್ಯವಿಲ್ಲ ಎಂಬುದನ್ನು ಇಡೀ ದೇಶದ ಇಡೀ ಜನತೆಯ ಬೇಡಿಕೆಯೂ ಆಗಿದೆ ಎಂಬುದನ್ನು ಇಡೀ ಪ್ರಪಂಚಕ್ಕೆ ತೋರಿಸಿಕೊಟ್ಟಿತು. ಮತ್ತು ಆ ಸಮಸ್ಯೆಗಳು ತತ್ಕಾಲೀನ ಹಿತಗಳನ್ನು ಮೀರಿದುದವೂ ಆಗಿದ್ದವು.

ಭ್ರಷ್ಟಾಚಾರವನ್ನು ನಿರ್ಮೂಲನ ಮಾಡುವುದೇ ಆದಲ್ಲಿ ಮಂತ್ರಿಮಂಡಲವನ್ನು ತೆಗೆದುಹಾಕಲೇಬೇಕು. ಬೆಲೆ ಏರಿಕೆ ಶಿಕ್ಷಿತರಲ್ಲಿ ಮತ್ತು ಅಶಿಕ್ಷಿತರಲ್ಲಿಯ ನಿರುದ್ಯೋಗ ಸಮಸ್ಯೆ ಹಾಗೂ ಪದಾರ್ಥಗಳ ಅಭಾವವನ್ನು ಸಮಾಪ್ತಗೊಳಿಸಲೇಬೇಕು. ಈ ಮೂರೂ ಸಮಸ್ಯೆಗಳು ಕೇವಲ ಗುಜರಾತ್ ಅಥವಾ ಆ ರಾಜ್ಯದ ವಿದ್ಯಾರ್ಥಿಗಳಿಗಲ್ಲ ಅವು ಇಡೀ ರಾಷ್ಟ್ರವನ್ನು ಹಿಂಸಿಸುತ್ತಿರುವಂಥ ಸಮಸ್ಯೆಗಳಾಗಿವೆ. ಆದರೆ ಗುಜರಾತ್ ರಾಜ್ಯದ ವಿದ್ಯಾರ್ಥಿಗಳು ಈ ಸಮಸ್ಯೆಗಳನ್ನು ಎತ್ತಿಕೊಂಡದ್ದು ಮಾತ್ರ ಮೊದಲನೆಯ ಪ್ರಸಂಗವಾಗಿತ್ತು. ಆದಾದ ಕೆಲ ಸಮಯದ ನಂತರ ಬಿಹಾರದ ವಿದ್ಯಾರ್ಥಿಗಳು ಅದನ್ನು ಅನುಸರಿಸಿದರು. ಬಿಹಾರದ ವಿದ್ಯಾರ್ಥಿಗಳ ನಾಯಕರ ವಿನಂತಿಯ ಮೇರೆಗೆ ಜಯಪ್ರಕಾಶರು ಅವರ ಚಳುವಳಿಯ ನೇತೃತ್ವವನ್ನು ದಹಿಸಿಕೊಂಡರು. ರಾಜಕೀಯ ಯುದ್ಧ ನೀತಿಯ ಓರ್ವ ಪಟುವಿನ ರೂಪದಲ್ಲಿ ಅವರು ರಾಜಕೀಯ ಭ್ರಷ್ಟಾಚಾರ ಮತ್ತು ಜನತೆಯ ಸಮಸ್ಯೆಗಳ ಬಗ್ಗೆ ಸರ್ಕಾರ ಮತ್ತು ಶಾಸಕರ ಉದಾಸಿನತೆಯನ್ನು ದೋಷಪೂರಿತವಾದ ಚುನಾವಣಾ ಪದ್ಧತಿಯ ಅಂಗವಾಗಿ ನೋಡಿದರು. ಆದ್ದರಿಂದ

ಮಂತ್ರಿ ಮಂಡಲದ ರಾಜೀನಾಮೆ ಬೇಡಿಕೆಯ ಜೊತೆಗೆ ಚುನಾವಣಾ ಪದ್ಧತಿಯಲ್ಲಿ ಸುಧಾರಣೆ ಮತ್ತು ಸುಧಾರಿತ ಪದ್ಧತಿಯ ರೀತಿಯಲ್ಲಿ ಹೊಸ ಚುನಾವಣೆಯ ಬೇಡಿಕೆಯನ್ನು ಮಂಡಿಸಲಾಯಿತು. ಚುನಾವಣಾ ಪದ್ಧತಿಯ ಸುಧಾರಣೆಯ ಬೇಡಿಕೆಯಲ್ಲಿ ಪ್ರತಿನಿಧಿಯನ್ನು ಹಿಂದಕ್ಕೆ ಕರೆಸಿಕೊಳ್ಳುವ ಅಧಿಕಾರವು ಒಂದು ಮುಖ್ಯ ಅಂಶವಾಗಿತ್ತು. ಜಯಪ್ರಕಾಶರ ತರ್ಕವು ಈ ರೀತಿ ಇತ್ತು; ಪ್ರತಿನಿಧಿಯನ್ನು ಹಿಂದಕ್ಕೆ ಕರೆಯುವ ಅಧಿಕಾರವು ಒಂದು ವೇಳೆ ಮತದಾರರಿಗೆ ದೊರೆತುದಾದರೆ ಜನತೆಯ ಸಮಸ್ಯೆಗಳ ಬಗ್ಗೆ ಶಾಸಕರ ಮತ್ತು ಸರ್ಕಾರದ ಉದಾಸೀನತೆಯನ್ನು ದೂರಮಾಡಬಹುದು. ಜಯಪ್ರಕಾಶರ ಸಾಹಸ ಮತ್ತು ಅವರ ಸಂಘಟನಾ ಸಾಮರ್ಥ್ಯವು ಇಡೀ ರಾಜ್ಯದಲ್ಲಿ ಅಲ್ಲೋಲ ಕಲ್ಲೋಲವನ್ನುಂಟು ಮಾಡಿತು. ೧೯೭೪ ರ ಕೊನೆಯಲ್ಲಿ ಇಡಿ ವಿದ್ಯಾರ್ಥಿ ಸಮುದಾಯವು ಒಂದಲ್ಲ ಒಂದು ರೂಪದಲ್ಲಿ ಈ ಚಳುವಳಿಯಲ್ಲಿ ಭಾಗಿಯಾಯಿತು. ಅವರು ಬೀದಿಗೆ ಇಳಿದರು. ಶಾಸಕರು ರಾಜೀನಾಮೆ ಕೊಡುವಂತೆ ಮಾಡಲು ಅವರ ಮನೆಗಳ ಮುಂದೆ ಧರಣಿ ಮಾಡಿದರು. ಸರ್ಕಾರದ ವಾಹನಗಳ ದುರುಪಯೋಗವನ್ನು ತಡೆಯುವುದಕ್ಕಾಗಿ ವಿದ್ಯಾರ್ಥಿಗಳು ಪ್ರದರ್ಶನ ಮಾಡಿದರು. ಆಗಸ್ಟ್ ತಿಂಗಳ ಕೊನೆಯಲ್ಲಿ ಬಿಹಾರಿನಲ್ಲಿ ಬಹಳಷ್ಟು ಪ್ರದೇಶವು ಪ್ರವಾಹಕ್ಕೆ ತುತ್ತಾಗಿತ್ತು. ಆಗ ವಿದ್ಯಾರ್ಥಿಗಳು ಪ್ರವಾಹ ಪೀಡಿತರಿಗೆ ನೆರವು ತಲುಪಿಸುವ ಕೆಲಸವನ್ನು ಮಾಡಿದರು. ಬಿಹಾರಿನಲ್ಲಿ ವಿಭಿನ್ನ ರೂಪಗಳಲ್ಲಿ ಸ್ವಯಂ ಪ್ರೇರಣೆಯಿಂದ ಉತ್ಸಾಹದ ಬಗ್ಗೆ ಹೊರ ಹೊಮ್ಮಿದೆ ಎಂದು ಅನಿಸುತ್ತಿತ್ತು. ಬಹಳಷ್ಟು ಶಾಸಕರು ರಾಜೀನಾಮೆ ಕೊಟ್ಟರು. ಸರ್ಕಾರವು ದಮನ ನೀತಿಯನ್ನು ಅನುಸರಿಸಿತು. ಸರ್ಕಾರದ ಪ್ರತಿ ಬಂಧಗಳನ್ನು ಉಲ್ಲಂಘಿಸಿ ಒಂದು ವಿಶಾಲವಾದ ಪ್ರದರ್ಶನ ನಡೆಯಿತು. ಈ ಪ್ರದರ್ಶನದಲ್ಲಿ ಜನರು ಬರಲು ಸಾಧ್ಯವಾಗದಂತೆ ಸರ್ಕಾರವು ಯಾವುದೇ ಪ್ರಯತ್ನವನ್ನು ಮಾಡದೇ ಇರಲಿಲ್ಲ. ಗಂಗಾನದಿಯ ಮೇಲೆ ಪೋಲಿಸ್ ಮತ್ತು ಅರ್ಧ ಸೈನಿಕರನ್ನು ಕಾವಲಿಗೆ ಹಾಕಿತು. ಏಕೆಂದರೆ ಜನರು ದೋಣಿಗಳ ಮೂಲಕ ಪಾಟ್ನ ತಲುಪ ಬಾರದೆಂಬುದೇ ಉದ್ದೇಶವಾಗಿತ್ತು. ಸ್ವತಃ ಜಯಪ್ರಕಾಶರೇ ಈ ಪ್ರದರ್ಶನದ ಮುಂದಾಳತ್ವವನ್ನು ವಹಿಸಿಕೊಂಡರು. ಪ್ರದರ್ಶನವನ್ನು ತಡೆಯುವುದಕ್ಕಾಗಿ ಪೋಲಿಸರು ಲಾಠಿ ಪ್ರಯೋಗಮಾಡಿದರು. ಆಗ ಜಯಪ್ರಕಾಶರಿಗೂ ಕೂಡ ಏಟು ಬಿದ್ದಿತು. ವಿದ್ಯಾರ್ಥಿಗಳು ಮತ್ತು ಯುವಕರ ಸಂಘಟನೆಗಳನ್ನು ಒಂದು ವೇದಿಕೆಯ ಮೇಲೆ ತರುವ ಪ್ರಯತ್ನ ಮಾಡಿದರು. ಕಾಂಗ್ರೇಸ್ ಮತ್ತು ಕಮ್ಯುನಿಸ್ಟರ ಸಂಘಟನೆಗಳ ಹೊರತಾಗಿ ಉಳಿದ ಎಲ್ಲ ಚಿಕ್ಕ ಮತ್ತು ದೊಡ್ಡ ವಿದ್ಯಾರ್ಥಿ ಸಂಘಟನೆಗಳು ಈ ಆಂದೋಲನದಲ್ಲಿ ಸೇರಿಕೊಂಡವು. ಜಯಪ್ರಕಾಶರು ಚಳು

ವಳಿಯ ಗುರಿಗಳನ್ನು ಸಾಧಿಸುವುದಕ್ಕಾಗಿ, ಸಂಘರ್ಷವನ್ನು ನಿರಂತರವಾಗಿ ಉಳಿಸಿಕೊಂಡು ಬರುವ ಉದ್ದೇಶದಿಂದ ವಿದ್ಯಾರ್ಥಿ ಯುವ ಸಂಘರ್ಷ ವಾಹಿನಿ ಎಂಬ ಹೆಸರಿನಲ್ಲಿ ತಮ್ಮದೇ ಆದ ಒಂದು ಸಂಘಟನೆಯನ್ನು ರಚಿಸಿದರು. ಅವರು ಚಳುವಳಿಯ ಗುರಿ ಸಂಪೂರ್ಣ ಕ್ರಾಂತಿಯೆಂದು ಸ್ಪಷ್ಟ ಪಡಿಸಿದರು. ಏಕೆಂದರೆ ಅದರಲ್ಲಿ ಎಲ್ಲರೂ ತಮ್ಮ ತಮ್ಮ ಆಕಾಂಕ್ಷಗಳು ಪ್ರತಿಬಿಂಬಿತ ಆಗುತ್ತಿರುವಂತೆ ಅನುಭವ ಪಟ್ಟರೂ. ಆ ಚಳುವಳಿಯಲ್ಲಿ ಅವರಿಗೆ ಸ್ವಾತಂತ್ರ್ಯ ಹಾಗೂ ಒಳ್ಳೆಯ ಭೌತಿಕ ಜೀವನದ ತಮ್ಮ ಇಚ್ಛೆ ಅಭಿವ್ಯಕ್ತವಾಗುತ್ತಿರುವಂತೆ ಅನುಭವವಾಯಿತು. ಸಂಪೂರ್ಣ ಕ್ರಾಂತಿಯ ಘೋಷಣೆ ಮೋಹಕವಾಗಿತ್ತು, ಮತ್ತು ನೋಡು ನೋಡುತ್ತಿರುವಂತೆಯೇ ಅದು ಇಡೀ ದೇಶದ ತುಂಬಾ ಮೊಳಗಿತು. ಜನರು ಸಂಪೂರ್ಣ ಕ್ರಾಂತಿಯ ಬಗ್ಗೆ ಮಾತನಾಡಲು ಪ್ರಾರಂಭಿಸಿದರು. ಆಂದೋಲನದ ಸಂದರ್ಭದಲ್ಲಿ ಜಯಪ್ರಕಾಶರು ಸಮಾನಾಂತರ ಸರ್ಕಾರದ ಸ್ಥಾಪನೆಯ ಕಾರ್ಯಕ್ರಮವನ್ನು ಕೂಡ ಮಂಡಿಸಿದರು. ಈ ಸಂದರ್ಭದಲ್ಲಿ ಒಂದು ಮಾತಿನ ಕಡೆಗೆ ಗಮನ ಕೊಡಬೇಕು. ೧೯೧೭ರಲ್ಲಿ ಲೆನಿನ್ ಕೂಡ ರಷಿಯಾದಲ್ಲಿ ಎಲ್ಲ ಅಧಿಕಾರವನ್ನು ಜನಸಂಘಟನೆಗಳಿಗೆ ಹಸ್ತಾಂತರಗೊಳಿಸಬೇಕೆಂಬ ಬೇಡಿಕೆಯನ್ನು ಮುಂದಿಟ್ಟಿದ. ಜಯಪ್ರಕಾಶರ ಸಮಾನಾಂತರ ಸರ್ಕಾರದ ಕಾರ್ಯಕ್ರಮದಲ್ಲಿ ಲೆನಿನ್‌ರವರ ಬೇಡಿಕೆಯ ಪ್ರತಿಧ್ವನಿ ಕೇಳಿ ಬರುತ್ತದೆ ಲೆನಿನ್‌ನರ ಚಳುವಳಿ ಹಿಂಸಕವಾಗಿದ್ದರೆ ಜಯಪ್ರಕಾಶರ ಚಳುವಳಿ ಅಹಿಂಸಕವಾಗಿತ್ತು. ಆಂದೋಲನವು ದೇಶದ ಇತರ ಭಾಗಗಳಲ್ಲಿಯೂ ಹಬ್ಬಲೂ ಶುರುವಾಯಿತು. ಆದರೆ ಅದು ಅಖಿಲ ಭಾರತದ ಸ್ವರೂಪವನ್ನು ತಳೆಯುವ ಮೊದಲೇ ಕೆಲವು ರಾಜಕೀಯ ಘಟನೆಗಳು ನಡೆದವು. ಅವು ಜಯಪ್ರಕಾಶರ ಏಜೆಂಡಾವನ್ನು ಪೂರ್ಣ ರೂಪವಾಗಿ ಬದಲಾಯಿಸಿಬಿಟ್ಟವು. ೧೯೭೫ರ ಜೂನ್ ತಿಂಗಳಲ್ಲಿ ಅಲಹಬಾದ್ ಉಚ್ಚ ನ್ಯಾಯಾಲಯವು ಪ್ರಧಾನಮಂತ್ರಿ ಇಂದಿರಾ ಗಾಂಧೀಯವರನ್ನು ಚುನಾವಣೆಯಲ್ಲಿಯ ಅವರ ಗೈರ್ ಕಾನೂನಿ ವ್ಯವಹಾರಗಳಿಂದಾಗಿ ಅಪರನ್ನು ದೋಷಿತರೆಂದು ತೀರ್ಮಾನಿಸಿತು. ರಾಜಕೀಯ ಅಧಿಕಾರದ ವಾಸ್ತವಿಕತೆಯೊಂದಿಗೆ ಜಯಪ್ರಕಾಶರಿಗೆ ಇನ್ನೊಂದು ಸಲ ಮುಖಾ ಮುಖಿಯಾಯಿತು ಏಕಮಾತ್ರ ಉಪಾಯವಾಗಿ ಲೋಕಸಭಾ ಇಂದಿರಾಗಾಂಧೀಯವರನ್ನು ಚುನಾವಣೆಯಲ್ಲಿ ಸೋಲಿಸುವುದೇ ಆಗಿತ್ತು. ಜಯಪ್ರಕಾಶರು ತಮ್ಮ ಪಕ್ಷಾತೀತ ಸಿದ್ಧಾಂತವನ್ನು ಪರಿತ್ಯಜಿಸಿ ಚುನಾವಣೆಯಲ್ಲಿ ಇಂದಿರಾಗಾಂಧಿಯವರಿಗೆ ಸವಾಲನ್ನು ಒಡ್ಡಲು ನಿಶ್ಚಯಿಸಿದರು. ಇಂದಿರಾಗಾಂಧಿಯವರ ವಿರೋಧ ಮಾಡುತ್ತಿದ್ದಂಥಹ ಎಲ್ಲ ರಾಜಕೀಯ ಪಕ್ಷಗಳನ್ನು ಸೇರಿಸಿ ಒಂದು ಹೊಸ ಪಾರ್ಟಿ ಜನತಾ ಪಾರ್ಟಿಯನ್ನು ಸಂಘಟಿಸುವುದಕ್ಕಾಗಿ ಪ್ರೇರಣೆಯನ್ನು ಕೊಟ್ಟಿತು. ಇದು ಅವರ ವ್ಯಕ್ತಿತ್ವದ ಒಂದು

ಪರಿಣಾಮವೇ ಆಗಿತ್ತು. ಮೊರಾರ್ಜಿ ದೇಸಾಯಿ, ಜಾರ್ಜ್ ಫರ್ನಾಂಡಿಸ್, ಚರಣ್ ಸಿಂಗ್ ಮತ್ತು ಅಟಲ್‌ಬಿಹಾರಿ ವಾಜಪೇಯಿಯವರಂಥ ಬೇರೆ ಬೇರೆ ಪ್ರಕಾರದ ವ್ಯಕ್ತಿಗಳನ್ನು ಒಂದು ಪಕ್ಷದ ಒಳಗಡೆಗೆ ತರಲಾಯಿತು. ೧೯೭೭ರ ಪ್ರಾರಂಭದಲ್ಲಿ ಎಮರ್ಜೆನ್ಸಿಯನ್ನು ಜಾರಿಗೆ ತಂದು ಸಾರ್ವತ್ರಿಕ ಚುನಾವಣೆಯನ್ನು ಘೋಷಿಸಲಾಯಿತು. ಜನತಾ ಪಾರ್ಟಿಯ ರೂಪದಲ್ಲಿ ಒಂದು ಪಕ್ಷವು ಸ್ಪರ್ಧಿಸಿತು. ಆ ಪಕ್ಷವು ಇಂದಿರಾಗಾಂಧೀಯವರನ್ನು ಸೋಲಿಸಿತು. ಜಯಪ್ರಕಾಶರ ಆರೋಗ್ಯ ಒಮ್ಮೆಲೆ ಕೆಟ್ಟುಹೋಯಿತು. ಇಂದಿರಾಗಾಂಧೀಯವರ ಸರ್ವಾಧಿಕಾರವನ್ನು ಸಮಾಪ್ತಗೊಳಿಸಿ ಪುನಃ ಪ್ರಜಾಪ್ರಭುತ್ವದ ಸ್ಥಾಪನೆಗಾಗಿ ಕಂಕಣಬದ್ಧರಾಗಿದ್ದರು. ಒಂದು ರೀತಿಯಲ್ಲಿ ಅವರು ಮರಣದ ಹಾಸಿಗೆಯಿಂದಲೇ ಸರ್ವಾಧಿಕಾರವನ್ನು ಕಿತ್ತೆಸೆಯಲು ರಾಷ್ಟ್ರಕ್ಕೆ ಕರೆ ಕೊಟ್ಟರು. ಇಂದಿರಾಗಾಂಧೀಯವರನ್ನು ಸೋಲಿಸುವುದರಲ್ಲಿ ಮತ್ತು ತುರ್ತು ಪರಿಸ್ಥಿತಿಯನ್ನು ನಿವಾರಿಸುವಲ್ಲಿ ಅವರ ಪಾತ್ರ ಸರಿಸಾಟಿಯಿಲ್ಲದ್ದಾಗಿತ್ತು. ಜಯಪ್ರಕಾಶರು ಓರ್ವ ದಣಿವರಿಯದ ಸಿಪಾಯಿ ಮತ್ತು ಆದರ್ಶವಾದಿ ವ್ಯಕ್ತಿಯಾಗಿದ್ದರು. ಒಂದು ಉತ್ತಮ ರೀತಿಯ ಸಮಾಜವನ್ನು ಸೃಷ್ಟಿಸುವ ಉತ್ಸಾಹದಲ್ಲಿ ಅವರು ಅನೇಕ ಆಂದೋಲನಗಳಲ್ಲಿ ಮಹತ್ವದ ಪಾತ್ರವನ್ನು ನಿರ್ವಹಿಸಿದರು. ಈ ಆಂದೋಲನಗಳಲ್ಲಿ ಅನೇಕವು ಅನಿವಾರ್ಯವಾಗಿ ಮಧ್ಯದಲ್ಲಿಯೇ ನಿಂತವು ಮತ್ತು ತಮ್ಮ ಗುರಿಯನ್ನು ತಲುಪಲಾರದೇ ಹೋದವು. ಜಯಪ್ರಕಾಶರ ಪ್ರಯತ್ನ ಪೂರ್ಣ ರೂಪದಲ್ಲಿ ಸಫಲವಾಗದೇ ಇರಬಹುದು. ಆದರೆ ಅವರ ಪ್ರಯತ್ನಗಳಿಂದ ನಮ್ಮ ದೇಶದ ಪ್ರಜಾಪ್ರಭುತ್ವದ ರಕ್ಷಣೆಮಾಡುವ ಮತ್ತು ದೇಶದ ಜನತೆಗೆ ನಾಗರಿಕ ಅಧಿಕಾರಗಳ ಇರುವಿಕೆಯನ್ನು ಗೊತ್ತುಮಾಡುವ ದಿಕ್ಕಿನಲ್ಲಿ ಬಹಳಷ್ಟು ಪ್ರಯತ್ನಿಸಿದ್ದಾರೆ. ಒಂದು ವೇಳೆ ಅವರು ಸಮಾಜವಾದಿ ಪಕ್ಷವನ್ನು ಸಂಘಟಿಸದೆ ಹೋಗಿದ್ದರೆ ಭಾರತದ ವಾಮ ಪಕ್ಷವು ಕೂಡ ಬೇರೆ ದೇಶಗಳಂತೆ ಸರ್ವಾಧಿಕಾರದ ಮಾರ್ಗವನ್ನೇ ತುಳಿಯುತ್ತಿತ್ತು. ಜಯಪ್ರಕಾಶರು ನಾಗರಿಕ ಅಧಿಕಾರಗಳ ರಕ್ಷಣೆಯ ಸಂಘವನ್ನು ಸ್ಥಾಪಿಸಿದರು. ಜಯಪ್ರಕಾಶರು ತಮ್ಮ ಅಸಫಲತೆಗಳಿಂದ ಎಷ್ಟೊಂದು ಸಾಧನೆಯನ್ನು ಮಾಡಿದರೋ ಅಷ್ಟೊಂದು ಸಾಧನೆಯನ್ನು ಸಫಲರಾದ ವ್ಯಕ್ತಿಗಳೂ ಮಾಡಲಾರರು.

ಸನ್ಮಾನ್ಯರಿಂದ...........

"ನಿಮ್ಮಿಂದ ಬರುತ್ತಿರುವ 'ಜನಪದ' ವಿಚಾರ ಪತ್ರಿಕೆಯಲ್ಲಿ ವಿಚಾರಗಳು ತುಂಬ ಉಪಯುಕ್ತವಾಗಿರುತ್ತವೆ. ಆದಕ್ಕಾಗಿ ಧನ್ಯವಾದಗಳು.

– ಬಿ. ಮಂಜುನಾಥ್

ಗಾಂಧೀ ಮತ್ತು ಇಂದಿನ ಭಾರತೀಯ ಆರ್ಥಿಕ ಸ್ಥಿತಿ

ಪ್ರೊಫೆಸರ್ ಎಸ್. ಆದಿಶೇಷಯ್ಯ

ಇಂದು ಜನವರಿ ಮೂವತ್ತು : ನಮ್ಮೆಲ್ಲರಿಗೆ ಮತ್ತು ನನಗೂ ಸಹ ಒಂದು ಮಹತ್ವದ ಸಂದರ್ಭ ಹಾಗೂ ಸ್ಮರಣೀಯ ದಿನ. ಇಂದು ನಾವು ಮಹಾತ್ಮಾ ಗಾಂಧೀ ಹುತಾತ್ಮರಾದುದನ್ನು ಸ್ಮರಿಸಿಕೊಳ್ಳುತ್ತಿದ್ದೇವೆ. ರಾಷ್ಟ್ರ ಪಿತನ ಬದುಕಿನ ಆ ಅಂತಿಮ ದಿನವು ಸಾಕ್ರೆಟಿಸ್ ಹಾಗೂ ಜೀಸಸ್‌ರಂಥ ವಿದ್ವಜ್ಜನರ ಮತ್ತು ಪವಿತ್ರಾತ್ಮರ ಪರಂಪರೆಯನ್ನು ಮುಂದುವರಿಸಿಕೊಂಡುಬಂದಿದೆ. ಇಂದು ನಾವು ಗಾಂಧೀಯವರ ಹುತಾತ್ಮತೆಯನ್ನು ಸ್ಮರಿಸಿಕೊಳ್ಳುವ ಸಂದರ್ಭ ದಲ್ಲಿ ನಾವೆಲ್ಲರೂ ಅವರ ಜೀವನ ಮತ್ತು ಅದಕ್ಕೂ ಹೆಚ್ಚಾಗಿ ಅವರ ಮರಣವು ನಮ್ಮ ಜೀವನವನ್ನು ಹೇಗೆ ಮತ್ತು ಎಷ್ಟರ ಮಟ್ಟಿಗೆ ರೂಪಿಸುತ್ತಿದೆ ಮತ್ತು ಬದಲಾಯಿಸುತ್ತಿದೆ ಮತ್ತು ಅವರ ಜೀವನದ ಅತ್ಯಂತ ಶ್ರೇಷ್ಠ ಮೌಲ್ಯವಾಗಿದ್ದ ಅಹಿಂಸೆ ಯಾವುದು ಎಲ್ಲ ಧರ್ಮಗಳ ಹಾಗೂ ಸಂಸ್ಕೃತಿಗಳ ಸಮಾನತೆಯ ದ್ಯೋತಕವಾಗಿತ್ತೊ, ಮತ್ತು ಯಾವ ಅಹಿಂಸೆ ಸತ್ಯದ ಚ್ಯುತಿಗೊಳ್ಳದ ಆಚರಣೆ ಯಾಗಿತ್ತೋ ಮತ್ತು ಯಾವ ಅಹಿಂಸೆ ಗಾಂಧೀಯವರ ವಿಚಾರದಲ್ಲಿ ಮತ್ತು ಪೂಜೆಯಲ್ಲಿ ದೇವರಾಗಿತ್ತೋ ಅಂಥ ಅಹಿಂಸೆಯ ರಕ್ಷಣೆಗಾಗಿ ಅವರು ಮರಣ ಹೊಂದುವುದಕ್ಕೆ ಕಾರಣರಾದ ನಾವು ಪ್ರಾಯಶ್ಚಿತಮಾಡಿಕೊಳ್ಳಲು ಎಷ್ಟರ ಮಟ್ಟಿಗೆ ಸಮರ್ಥರಾಗಿದ್ದೇವೆ ಮತ್ತು ಇಷ್ಟ ಪಡುತ್ತೇವೆ ಎಂಬುದನ್ನು ಪರೀಕ್ಷಿಸಿಕೊಳ್ಳಬೇಕು.

ಇಂದಿನ ಸ್ಮರಣೀಯ ದಿನದಂದು ಅವರನ್ನು ಕುರಿತು ಮಾತನಾಡಲು ನನ್ನನ್ನು ಆಹ್ವಾನಿಸಿರುವುದನ್ನು ನಾನು ಅವರಿಗೆ ಸಲ್ಲಿಸಬಹುದಾದ ಗೌರವ ವೆಂದೇ ಭಾವಿಸುತ್ತೇನೆ. ಅದಕ್ಕಾಗಿ ಈ ಸಭೆಯ ಸಂಯೋಜಕರಿಗೆ ನಾನು ಆಭಾರಿಯಾಗಿದ್ದೇನೆ. ನನ್ನ ಉಪನ್ಯಾಸದ ವಿಷಯವಾಗಿ "ಗಾಂಧೀ ಮತ್ತು ಭಾರತೀಯ ಅರ್ಥಶಾಸ್ತ್ರ" ಎಂಬುದನ್ನು ಆರಿಸಿಕೊಂಡಿದ್ದೇನೆ.

ಗಾಂಧೀಯವರ ಜೀವನ, ವಿಚಾರ, ಬೋಧನೆ ಮತ್ತು ಮರಣ ಅಪರಿ ಮಿತ ವಿಷಯದ ಗಣಿಯಾಗಿದೆ; ಅದಕ್ಕೆ ಆದಿಯೂ ಇಲ್ಲ, ಅಂತ್ಯವೂ ಇಲ್ಲ. ಅವರ ಈ ಬಹುಮುಖಿ ಜೀವನ ಮತ್ತು ವ್ಯಕ್ತಿತ್ವದಲ್ಲಿ ಕಿರಿದಾದ ಮತ್ತು ಒಂದೇ ಮಗ್ಗುಲಿಗೆ ಸಂಬಂಧಿಸಿದ ವಿಷಯಕ್ಕೆ ನಾನು ಸೀಮಿತಗೊಳ್ಳ ಬಯಸುತ್ತೇನೆ ಮತ್ತು ಆ ವಿಷಯವು ಅರ್ಥಶಾಸ್ತ್ರಕ್ಕೆ ಸಂಬಂಧಿಸಿದಂತೆ ಗಾಂಧೀಜಿ ಯವರ ವಿಚಾರ. ಅದರಲ್ಲಿಯೂ ಭಾರತೀಯ ಅರ್ಥಶಸ್ತ್ರದ ಸಂದರ್ಭದಲ್ಲಿ ಗಾಂಧೀಜಿಯವರ ವಿಚಾರಗಳಿಗೆ ನಾನು ಸೀಮಿತಗೊಳ್ಳ ಬಯಸುತ್ತೇನೆ. ನಾನು

ಈ ವಿಷಯವನ್ನು ಸಾಮಾನ್ಯವಾಗಿ ಯಾವುದನ್ನು "ಗಾಂಧೀ ಅರ್ಥಶಾಸ್ತ್ರವೆಂದು ಕರೆಯುತ್ತಾರೋ ಆ ದೃಷ್ಟಿಯಿಂದ ಈ ಪ್ರಸ್ತಾಪಿಸುತ್ತಿಲ್ಲ. "ಗಾಂಧೀ ಅರ್ಥಶಾಸ್ತ್ರ" ಎಂಬ ಶಬ್ದದ ವ್ಯುತ್ಪತ್ತಿ ಅವರ ಜೀವಿತ ಕಾಲದಲ್ಲಿಯೇ ಆಗಿ ಇಂದಿಗೂ ಎರಡು ಕಾರಣಗಳಿಂದಾಗಿ ಉಪಯೋಗದಲ್ಲಿದೆ. ಒಂದು ಕಾರಣ ಗಾಂಧೀಯವರು ಅರ್ಥ ವಿಜ್ಞಾನಕ್ಕಿಂತ ದೊಡ್ಡವರಾಗಿದ್ದರು. ವೃತ್ತಿಪರ ಕ್ಷೇತ್ರದಲ್ಲಿ ಅದಕ್ಕಿರುವ ಅರ್ಥದ ಪ್ರಕಾರ ತಾವು ಅರ್ಥಶಾಸ್ತ್ರಜ್ಞರಲ್ಲವೆಂದು ಅವರು ಸ್ಪಷ್ಟಪಡಿಸಿದ್ದಾರೆ. ಅವರು ಆಡಮ್ ಸ್ಮಿತ, ಡೇವಿಡ್ ರಿಚಾರ್ಡೋ, ದಿ ಮಿಲ್ಸ್ ಇವರಿಬ್ಬರೂ ತಂದೆ - ಮಗ, ಆಲ್‌ಫ್ರೆಡ್ ಮಾರ್ಶಲ್ ಮುಂತಾದ ಅರ್ಥಶಾಸ್ತ್ರಿಗಳ ಸಾಹಿತ್ಯವನ್ನು ತಾವು ಓದಿಲ್ಲವೆಂದೂ ಹೇಳಿದ್ದಾರೆ. ಅವರು ಆರ್ಥಿಕ ವಿಷಯಗಳಿಗೆ ಸಂಬಂಧಿಸಿದಂತೆ ತಮ್ಮ ವಿಚಾರಗಳನ್ನು ಅವರು ಮೂರು ಮೂಲಗಳಿಂದ ಪಡೆದಿದ್ದಾರೆ; ಮೊದಲನೆಯದು: ಅವರ ಆಳವಾದ ನೈತಿಕ ಹಾಗೂ ಆಧ್ಯಾತ್ಮಿಕ ನಿಷ್ಠೆಗಳು; ಎರಡನೆಯದು, ಜನರ ಅದರಲ್ಲಿಯೂ ಮುಖ್ಯವಾಗಿ ದೇಶದ ಜನಸಂಖ್ಯೆಯಲ್ಲಿ ೮೦ರಷ್ಟು ಇರುವ. ಗ್ರಾಮೀಣ ಜನರ ಆರ್ಥಿಕ ಪರಿಸ್ಥಿತಿಗಳ ಬಗ್ಗೆ ಅವರಿಗಿದ್ದ ನಿಕಟ ಸಂಪರ್ಕ; ಮತ್ತು ಮೂರನೆಯದು, ರಸ್ಕಿನ್ನನ 'ಅಂಟು ದಿಸ್ ಲಾಸ್ಟ್' ಮತ್ತು ಟಾಲ್‌ಸ್ಟಾಯ್ ಅವರ "ನಿಮ್ಮ ಅಂತರಂಗದಲ್ಲಿಯೇ ದೇವರ ಸಾಮ್ರಾಜ್ಯವಿದೆ". ಎಂಬ ಪುಸ್ತಕಗಳಲ್ಲಿ ಅವರು ಓದಿದ ವಿಷಯ ಮತ್ತು ಚಿಂತನ ಮತ್ತು ಅವುಗಳನ್ನು ಕೃತಿಗಿಳಿಸಿದುದರ ಪರಿಣಾಮಗಳು ಹಾಗೂ ದಕ್ಷಿಣ ಆಫ್ರಿಕಾದ ದಿನಗಳಿಂದ ಆಚರಿಸಿಕೊಂಡು ಬರಲಾಗಿದ್ದ ಅಹಿಂಸೆ, ಮತ್ತು ಸತ್ಯದ ಬಗ್ಗೆ ಅವರಿಗಿದ್ದ ನೈತಿಕ ಮತ್ತು ಆಧ್ಯಾತ್ಮಿಕ ನಂಬಿಕೆಗಳ ಮಿಶ್ರಣ ಮತ್ತು ಅವರ ಆಶ್ಚರ್ಯಕಾರಕ ಶಬ್ದಗಳನ್ನು ಉಪಯೋಗಿಸುವುದಾದರೆ "ನಿಜವಾದ ಅರ್ಥಶಾಸ್ತ್ರದ ಆದರ್ಶವು ಭೌತಿಕ ಉತ್ಪಾದನೆಯ ಹೆಚ್ಚಳವಲ್ಲ; ಒಳ್ಳೆಯ ವ್ಯಕ್ತಿಗಳನ್ನು ಸೃಷ್ಟಿಸುವುದೇ ಆಗಿದೆ.

"ಗಾಂಧೀ ಅರ್ಥಶಾಸ್ತ್ರ" ಎಂಬ ಶಬ್ದಗಳನ್ನೂ ಮತ್ತು ಅದು ಸೈದ್ಧಾಂತಿಕವಾಗಿ ಕೊಡುವ ಅರ್ಥವನ್ನೂ ನಾನು ಉಪಯೋಗಿಸುವುದಿಲ್ಲವೆಂದು ಈ ಮೊದಲು ಎರಡು ಕಾರಣಗಳಿಗಾಗಿ ಹೇಳಿದ್ದೆ. ಈಗ ತಾನೆ ಒಂದು ಕಾರಣವನ್ನು ವಿವರಿಸಿದ್ದೇನೆ: ಎರಡನೆಯ ಕಾರಣವೇನೆಂದರೆ ಅರ್ಥಶಾಸ್ತ್ರದ ನಿಯಮಗಳು ಒಂದು ಸಮೂಹ ಅಥವಾ ಒಂದು ಯುಗದ ಬಂಧನಕ್ಕೊಳಪಟ್ಟಿಲ್ಲ: ಅವು ಸಾರ್ವತ್ರಿಕ ಮತ್ತು ಆವು ಶಾಸನಗಳೇನಲ್ಲ. ಈ ನಿಯಮಗಳ ಅನ್ವಯವು ಆಯಾ ಕಾಲ ಮತ್ತು ಸ್ಥಳಕ್ಕೆ ತಕ್ಕಂತೆ ಮಾರ್ಪಾಡಾಗುತ್ತವೆ ಉದ್ಯೋಗದ ಹಾಗೂ ಜೀವನದ ಸಾಧನಗಳು ಕ್ರಿ.ಶಕ ೧ ರಲ್ಲಿ ಇದ್ದುದಕ್ಕಿಂತೆ ಕ್ರಿ.ಶಕ ೧೯ ರಲ್ಲಿ ಭಿನ್ನವಾಗಿದ್ದವು.

ಜೀವನ ಹಾಗೂ ಉದ್ಯೋಗದ ಸಾಧನಗಳ ಬಗ್ಗೆ ಉತ್ತರದ ಶೀತ ಪ್ರದೇಶದ ಜನರು ಹೊಂದುವ ಕಲ್ಪನೆಗಳೇ ಬೇರೆ, ಉಷ್ಣ ವಲಯದ ಜನರು ಹೊಂದುವ ಕಲ್ಪನೆಗಳೇ ಬೇರೆ; ಅಲ್ಲದೆ, ಕಾಲ ಕಳೆದಂತೆ ಜೀವನ ಹಾಗೂ ಕೆಲಸದ ಪರಿಸ್ಥಿತಿಗಳು ಬದಲಾಗುತ್ತ ಹೋಗುತ್ತವೆ. ಆದ್ದರಿಂದ ಅರ್ಥಶಾಸ್ತ್ರದ ತತ್ವಗಳ ಅನ್ವಯವು ಬೇರೆಯೇ ಆದ ಅರ್ಥವನ್ನೂ, ಸ್ವರೂಪವನ್ನೂ ಆಯಾ ಕಾಲ ಹಾಗೂ ಯುಗಗಳಿಗೆ ತಕ್ಕದಾಗಿ ಪಡೆಯುತ್ತದೆ. ನ್ಯಾಯ ವಿತರಣೆಯ ತತ್ವವನ್ನೇ ತೆಗೆದುಕೊಳ್ಳೋಣ. ಇಲ್ಲಿ ಆಡಮ್ ಸ್ಮಿತ್‌ರ ಮಾತುಗಳನ್ನು ಉದಾಹರಣೆಗಾಗಿ ತೆಗೆದುಕೊಳ್ಳಬಹುದು. ಈ ಮಾತುಗಳನ್ನು ಕುರಿತು ಆಡಮ್ ಸ್ಮಿಥ‌ರ್ ಬಗ್ಗೆ ಬಹಳಷ್ಟು ಅಪಪ್ರಚಾರವಾಗಿದೆ ಮತ್ತು ಯಾವಾಗಲೂ ಅವರನ್ನು ತಪ್ಪು ಭಾವಿಸಲಾಗುತ್ತಿದೆ. ಇದಕ್ಕೆ ಸಮರ್ಥನೆಯಾಗಿ ಅವರ ಈ ಪ್ರಸಿದ್ಧ ಶಬ್ದ ಗಳನ್ನು ಉದ್ಧರಿಸಲಾಗುತ್ತದೆ – "ಕಟುಕರವನ ದಯೆಯಿಂದಾಗಲೀ, ಹೆಂಡ ಇಳಿಸುವವನ ದಯೆಯಿಂದಾಗಲೀ, ನಮಗೆ ಮಧ್ಯಾಹ್ನದ ಊಟ ದೊರೆಯು ವುದಿಲ್ಲ. ಆದರೆ ಅವರ ಸ್ವಂತ ಸ್ವಾರ್ಥದ ಬಗ್ಗೆ ಇರುವ ಕಾಳಜಿಯಿಂದಾಗಿ ದೊರೆಯುತ್ತದೆ. ನಾವು ಅವರ ಮಾನವೀಯತೆಯನ್ನು ಕುರಿತು ಆಲೋಚಿಸುವು ದಿಲ್ಲ. ಬದಲಿಗೆ ಅವರ ಸ್ವಂತದ ಆಸಕ್ತಿಯನ್ನು ಕುರಿತು ಆಲೋಚಿಸುತ್ತೇವೆ; ನಾವು ಸ್ಮಿತ್ ಅವರ ಈ ಮಾತುಗಳ ನಂತರದ ವಾಕ್ಯಗಳನ್ನು ಓದಿದಾಗ ಸಹಕಾರ ಹಾಗೂ ನೆರವು ಮಾನವೀಯ ಅರ್ಥಶಾಸ್ತ್ರ ಸಂಬಂಧಗಳ ಆಧಾರವೆಂದು ಸ್ಮಿತ್ ನಂಬಿದ್ದರೆಂದು ಗೊತ್ತಾಗುತ್ತದೆ. ನ್ಯಾಯ ವಿತರಣೆ ಸಮಾಜದ ಅಡಿಪಾಯ ವಷ್ಟೇ ಅಲ್ಲ ಅದು ಮಾನವನ ಸ್ವಭಾವಕ್ಕೆ ಬಹಳ ಹತ್ತಿರವಾದುದು ಕೂಡ. ಇಲ್ಲಿ ನ್ಯಾಯದ ಲೋಕೋತ್ತರ ಸ್ವಭಾವವನ್ನು ಸ್ಮಿತ್ ಅಂಗೀಕರಿಸಿದ್ದಾರೆ. ಗಾಂಧೀಜಿ ಈ ತತ್ವವನ್ನು ತಮ್ಮ ಸಮಕಾಲೀನ ಭಾರತಕ್ಕೆ ಅನ್ವಯಿಸಿದಾಗ ಶ್ರಮ ಉಳಿಸುವ ಸಾಧನಗಳ ಉಪಯೋಗ ಮೂಗರಾಗಿರುವ ಜನಕ್ಕೆ ಒಂದು ರೀತಿಯಲ್ಲಿ ಅನ್ಯಾಯ ಮಾಡಿದಂತೆ ಎಂದು ಭಾವಿಸಿದರು.

ಗಾಂಧೀಜಿ ಅಂಕಿಸಂಖ್ಯೆಗಳನ್ನು ತಮ್ಮ ವಿಚಾರದ ಸಮರ್ಥನೆಗಾಗಿ ಉಪ ಯೋಗಿಸಿಕೊಳ್ಳುತ್ತಿದ್ದರೂ ಕೂಡ ವ್ಯಕ್ತಿಗೆ ಕೇಂದ್ರ ಸ್ಥಾನವನ್ನು ಹಾಗೂ ಪೂರ್ಣ ರೂಪದ ಮಹತ್ವವನ್ನು ಕೊಡುವುದಕ್ಕಾಗಿ ಅಂಕಿಸಂಖ್ಯೆಗಳನ್ನು ಮಾರ್ಪಾಡು ಮಾಡುತ್ತಿದ್ದರು. ಆದರೆ ಈ ಸಂಬಂಧವಾಗಿ ಅರ್ಥ ಶಾಸ್ತ್ರಜ್ಞರು ಹೊಂದಿರ ಬೇಕಾದ ನೈತಿಕ ಜವಾಬ್ದಾರಿಯ ಕಡೆಗೂ ಅವರ ಗಮನ ಸೆಳೆಯುತ್ತಿದ್ದರು. ಗಾಂಧೀ ಅರ್ಥಶಾಸ್ತ್ರ ವೆಂದೆನ್ನುವುದು ಅಪಾರ್ಥವಾದುದು. ಏಕೆಂದರೆ ಆ ಅರ್ಥಶಾಸ್ತ್ರವು ಗಾಂಧೀಜಿಯವರದಲ್ಲ. ಅದು ಇಂದಿನ ನಿಮ್ಮ ಕಾಲ ಹಾಗೂ ಪರಿಸ್ಥಿತಿಗೆ ಅವರ ಕಲ್ಪನೆಯಿಂದ ಅನ್ವಯವಾಗುವ ಶಾಸ್ತ್ರ ಮಾತ್ರ. ಯಾವ

ರೀತಿ ಭಾರತೀಯ ಅರ್ಥಶಾಸ್ತ್ರವೆಂದಾಗಲೀ, ಅಮೇರಿಕನ್ ಅರ್ಥಶಾಸ್ತ್ರವೆಂದಾಗಲೀ, ಕಮ್ಯುನಿಸ್ಟ್ ಅರ್ಥಶಾಸ್ತ್ರವೆಂದಾಗಲೀ, ಇರುವುದಿಲ್ಲವೋ ಅದೇ ರೀತಿ ಗಾಂಧೀ ಶಾಸ್ತ್ರವೆಂಬುದು ಇಲ್ಲ. ಅದು ಸಾಮಾನ್ಯ ಸತತವಾಗಿ ಇರುವ ಗಾಂಧೀ ಅರ್ಥಶಾಸ್ತ್ರವೂ ಇವೆ. ಅಪಾರ್ಥಕೊಡುವ ಈ ಶಬ್ದವನ್ನು ತಪ್ಪಿಸಬೇಕೆಂದು ಸೂಚಿಸಬಯಸುತ್ತೇನೆ. ಮತ್ತು ಅದಕ್ಕೆ ಬದಲಾಗಿ ಗಾಂಧೀಯವರ ಆರ್ಥಿಕ ವಿಚಾರಗಳು. ಮತ್ತು ಕೃತಿಗಿಳಿದಿರುವ ಅವರ ಆರ್ಥಿಕ ಬೋಧನೆಗಳು ಇವುಗಳ ಮೇಲೆ ನಮ್ಮ ಗಮನವನ್ನು ಕೇಂದ್ರೀಕರಿಸೋಣ ಮತ್ತು ಇಂದಿನ ಭಾರತೀಯ ಅರ್ಥ ಶಾಸ್ತ್ರದ ವಿಚಾರಕ್ಕೆ ಬಂದಾಗ ನಾವು ಕೇವಲ ೫ ಅಂಶಗಳಿಗೆ ನಮ್ಮನ್ನು ಸೀಮಿತಗೊಳಿಸೋಣ (೧) ಸಾಲವನ್ನು ಮರುಪಾವತಿಸುವ ಸಮಸ್ಯೆ; ೨) ಹಣದುಬ್ಬರದ ಸಮಸ್ಯೆ! (೩) ಅರೆನಿರುದ್ಯೋಗರ ಸಮಸ್ಯೆ: ೪) ಆದಾಯ ಮತ್ತು ಆಸ್ತಿಯ ಮಾಲೀಕತ್ವದಲ್ಲಿಯ ಅಸಮಾನತೆಯ ಸಮಸ್ಯೆ ೫) ಕಪ್ಪು ಹಣದ "ಅರ್ಥಶಾಸ್ತ್ರ:, ಹಾಗೂ ಅರ್ಥಶಾಸ್ತ್ರ ಒಂದಿರುವ ನೈತಿಕ ಆಧಾರ.

ಮುಂದಿನ ಸಂಚಿಕೆಯಲ್ಲಿ ಮುಂದುವರಿಯುವುದು.

ಮಹಾತ್ಮರ ಮರಣದ ಸಂದೇಶವನ್ನು ಭಾರತ ಎಂದು ತಿಳಿಯುವುದೋ?

- ಸುರೇಂದ್ರ ಕೌಲಗಿ

ಮೋಹನದಾಸ್ ಕರಮಚಂದ ಗಾಂಧೀಯನ್ನು ಭಾರತ 'ಮಹಾತ್ಮ' ಎಂದು ಕರೆಯಿತು, 'ರಾಷ್ಟ್ರಪಿತ' ಎಂದು ಗುರುತಿಸಿಕೊಂಡಿತು, 'ಬಾಪು' ಅಂದರೆ 'ತಂದೆ' ಯೆಂದೇ ಆತ್ಮೀಯವಾಗಿ ಕರೆಯಿತು. ಓರ್ವ ಸಾಮಾನ್ಯ ವಕೀಲನಾಗಿದ್ದ ಈ ವ್ಯಕ್ತಿಯನ್ನು ೧೦೦ ಕೋಟಿ ಜನಬಾಹುಳ್ಯವುಳ್ಳ ಹಾಗೂ ೫ ಸಾವಿರ ವರ್ಷಗಳ ಇತಿಹಾಸವುಳ್ಳ ದೇಶವ 'ರಾಷ್ಟ್ರಪಿತ'ನ ಸ್ಥಾನಕ್ಕೆ ಏರಿದ ಗಾಂಧೀ ಹುತಾತ್ಮರಾಗಿ ಇಂದಿಗೆ ೪೬ ವರ್ಷಗಳಾದವು. ಜನವರಿ ೩೦, ೧೯೪೮ ರಂದು ಗಾಂಧೀ ಹಂತಕನ ಗುಂಡಿಗೆ ಬಲಿಯಾಗಿ 'ಹೇರಾಮ್' ಎಂಬ ಜಪದೊಂದಿಗೆ ನೆಲಕ್ಕೆ ಕುಸಿದಾಗ ಭೂತಾಯಿ ಅವರನ್ನು ತನ್ನ ಒಡಲೊಳಗೆ ಸೇರಿಸಿಕೊಂಡಾಗ ಶಿಲುಬೆಗೆ ಏರಿದ ಏಸು, ೩೬ ದಿನ ಉಪವಾಸ ಮಾಡಿದ ಟೆರೆನ್ಸ್ ಮ್ಯಾಕ್ಸ್ವಿನಿ ಏಸು. ವಿಷ ಕುಡಿದ ಸಾಕ್ರೆಟಿಸ್‌ರಂಥ ಇತರ ಹಿರಿಯ ಚೇತನಗಳ ಪರಂಪರೆಗೆ ಸೇರಿ ಪ್ರಕೃತಿಯಲ್ಲಿ ಲೀನವಾದರು. ಇಂಥ ವೀರ ಮರಣಕ್ಕೆ ತಮ್ಮನ್ನು ಗಾಂಧೀ ಸಮ್ಮನೆ ವಿನಾಕಾರಣವಾಗಿ ಬಲಿಗೊಟ್ಟರೆ ಅಥವಾ ಆ ವೀರ ಮರಣದ

ಹಿಂದೆ ಯಾವುದಾದರೂ ಘನ ಉದ್ದೇಶ್ಯವಿತ್ತೇ ಎಂಬುದನ್ನು ಇಂದಿನ ಯುವ ಪೀಳಿಗೆ ಶೋಧಿಸಬೇಕಾಗಿದೆ. ಭೀಷ್ಮ ಪಿತಾಮಹ ಕುರುಕ್ಷೇತ್ರದ ರಣಾಂಗದಲ್ಲಿ ಶರಮಂಚದ ಮೇಲೆ ಮಲಗಿದ ಮಹಾಭಾರತ ಕಾಲದಿಂದ ೧೯೭೫ ರಲ್ಲಿ ಪುತಾತ್ಮರಾದ ಜಯಪ್ರಕಾಶ್ ನಾರಾಯಣವರೆಗೆ ಆತ್ಮ ಸಮರ್ಪಣೆ ಮಾಡಿದ ಮಹನಿಯರ ಮರಣದ ಹಿಂದೆ ಒಂದಲ್ಲ ಒಂದು ಸಂದೇಶ ಅಥವಾ ಮಹಾನ್ ಉದ್ದೇಶ್ಯ ಇದ್ದುದನ್ನು ಕಾಣುತ್ತೇವೆ. ಆದರೆ ಆ ಸಂದೇಶವನ್ನು ಅರ್ಥ ಮಾಡಿಕೊಳ್ಳದೇ ಇರುವ ಜನ ಆ ಕಾಲದಲ್ಲಿಯೇ, ಅವರ ಸುತ್ತಮುತ್ತಲೇ ಇರುವುದನ್ನು ಸಹ ನಾವು ಕಾಣುತ್ತೇವೆ ಈ ವೈರುಧ್ಯ, ಈ ವಿಪರ್ಯಾಸ ಸಮಾಜ ಜೀವನದ ಒಂದು ಭಾಗವೆಂದೇ ಭಾವಿಸೋಣವೇ ಅಥವಾ ವಿಚಾರ ಶಕ್ತಿಯನ್ನು ಹೊಂದಿರುವ ಮನುಷ್ಯ ಒಂದಿಲ್ಲ ಒಂದು ದಿನ ಈ ಎಲ್ಲ ಬಲಿ ದಾನಗಳ ಹಿಂದಿರುವ ಉದ್ದೇಶ್ಯಗಳನ್ನು ಖಂಡಿತವಾಗಿ ಅರ್ಥಮಾಡಿಕೊಂಡು ಆ ಬಲಿದಾನದ ಬೆಳಕಿನಲ್ಲಿ ತನ್ನ ಮೋಕ್ಷದ ದಾರಿಯನ್ನು ಕಂಡುಕೊಳ್ಳುತ್ತಾನೆ ಎಂದು ಭಾವಿಸೋಣವೆ? ಮುಂದೆಯೂ ಇಂಥ ಬಲಿದಾನಗಳು ಆಗುವುದಿಲ್ಲವೆಂಬುದಕ್ಕೆ ಯಾವ ಕಾರಣಗಳೂ ಇಲ್ಲ. ಆದ್ದರಿಂದ ಇಂದು ಅತ್ಯಗತ್ಯವಾಗಿ ಬೇಕಾಗಿರು ವುದು ಹೊಸ ಬಲಿದಾನಗಳಲ್ಲ, ಬದಲಿಗೆ ಈ ಬಲಿದಾನಗಳಿಗೆ ಕಾರಣವಾಗುವ ಸನ್ನಿವೇಶಗಳನ್ನು ಅರ್ಥಮಾಡಿಕೊಳ್ಳುವ ಕೆಲಸ. ಹಾಗಾದರೆ ಗಾಂಧೀಯ ಬಲಿ ದಾನದ ಹಿಂದೆ ಇದ್ದ ಪ್ರಬಲವಾದ ಉದ್ದೇಶ್ಯಗಳಾವವು? ಎಂಬುದನ್ನು ತಿಳಿಯೋಣ. ಮೊಟ್ಟ ಮೊದಲನೆಯದು. ಮಾನವರಲ್ಲಿ ಪರಸ್ಪರ ಪ್ರೇಮಭಾವನೆ ಬೆಳೆಸುವುದು; ಎರಡನೆಯದು, ಮಾನವನ ಪ್ರತಿಯೊಂದು ವ್ಯವಹಾರದ ಆಧಾರ ಶಿಲೆಯಾಗಿ ಸತ್ಯ ಮತ್ತು ಅಹಿಂಸೆ ಇರತಕ್ಕದ್ದು; ಮೂರನೇಯದು. ವರ್ಗರಹಿತ ಸಮಾಜದ ನಿರ್ಮಾಣ.

ನಾಲ್ಕನೇಯದು, ಭಂಗಿಯ ಕೆಲಸ, ಲಾಯರ್ ಕೆಲಸ ಮತ್ತು ವೈದ್ಯರ ಕೆಲಸ ಹಾಗೂ ಅಧಿಕಾರಿಯ ಕೆಲಸ ಇತ್ಯಾದಿ ಎಲ್ಲ ಕೆಲಸಗಳ ಕೆಲಸಗಾರರ ಒಂದು ದಿನದಶ್ರಮದ ಕೆಲಸಕ್ಕೆ ಒಂದೇ ಪ್ರಮಾಣದ ವೇತನ ಇರಬೇಕು: ಅಂದರೆ ದೈಹಿಕ ಶ್ರಮಕ್ಕೆ ನಿಜವಾದ ಗೌರವ ಹಾಗೂ ಜೀವನಕ್ಕೆ ಸಾಕಾಗು ವಷ್ಟು ಕೂಲಿ ದೊರೆಯಬೇಕು; ಐದನೇಯದು, ಪ್ರತಿಯೊಂದು ಗ್ರಾಮವೂ ಒಂದು ಗಣರಾಜ್ಯವಾಗಿ ರೂಪಾಂತರಗೊಂಡು ಸ್ವಾವಲಂಬಿ ಜೀವನ ನಡೆಸು ವಂತಾಗಬೇಕು; ಜನರು ತಮ್ಮ ಜೀವನದ ಪ್ರತಿಯೊಂದು ವಿಷಯಕ್ಕೆ ಸರ್ಕಾರದ ಕಡೆಗೆ ನೋಡುವುದಾದರೆ ಅದು ಸ್ವತಂತ್ರ ಭಾರತ ಸರ್ಕಾರದ ದುರಂತ; ಆರನೇಯದು, ಶಿಕ್ಷಣ. ಅದು ನೈತಿಕ ಮೌಲ್ಯಗಳ ಅಭಿಮುಖ ಮತ್ತು ಜೀವನಾಭಿಮುಖವಾಗಿರಬೇಕು;

ಮುಂದಿನ ಸಂಚಿಕೆಯಲ್ಲಿ ಮುಂದುವರಿಯುವುದು.

KA-SKMND-470/-2000.
Regd No. KAR/KAN/2000/3820
Vol 2 Issue 7.

ಕರದ-ಅಂಚೆ

Janapada Vichara – Kannada Monthly Digest Edited and Printed and Published by Surendra Koulagi at Janapada Seva Trust Printing Press. Melkote on behalf of Janapada Seva Trust. (Regd) Melkote. Dist – Mandya 571 431.

Phone : 08236/48754